ಸಂಪಾದಕರು: ದರ್ಶನ್.ಟಿ
Editor : DARSHAN.T

# ನಮ್ಮ ಜನ
# NAMMA JANA

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 02 ಸಂಚಿಕೆ – 85 | ಆರ್‌ಎನ್‌ಐ ನಂ: ಕೆಎಆರ್‌ಕೆಎಎನ್/2023/88462 | ಚಿತ್ರದುರ್ಗ | ದಿನಾಂಕ: 17–10–2024 ಗುರುವಾರ | ಪುಟ: 4 | ಬೆಲೆ : ರೂ.2–00
Volume - 02 Issue - 85 | RNI No: KARKAN/2023/88462 | Chitradurga | Date: 17-10-2024 Thursday | Page: 4 | Price: Rs. 2-00

ಒಳಪುಟದ ಸುದ್ದಿಗಳು
ಜಿಲ್ಲೆಯ 6 ಮತಗಟ್ಟೆಗಳ ಸ್ಥಳ, 34 ಮತಗಟ್ಟೆಗಳ ಹೆಸರು ಪರಿಷ್ಕರಣೆ 2
ಚಳ್ಳಕೆರೆ: ಒಂದೂವರೆ ವರ್ಷಗಳ ನಂತರ ನಡೆದ ನಗರಸಭೆಯ ಸಾಮಾನ್ಯ ಸಭೆ 3
ಆದಿಕಾವ್ಯ ವಾಲ್ಮೀಕಿ ರಾಮಾಯಣ ಆದಿಕವಿ ವಾಲ್ಮೀಕಿ ಮಹರ್ಷಿಗಳು 4

ಸುದ್ದಿ, ಜಾಹಿರಾತಿಗೆ 9686622252

ಫಾಸ್ಟ್ ನ್ಯೂಸ್

## ಜಿಲ್ಲೆಯಲ್ಲಿ 9.9 ಮಿ.ಮೀ ಮಳೆ

**ಚಿತ್ರದುರ್ಗ:** ಮಂಗಳವಾರ ರಾತ್ರಿ ಸುರಿದ ಮಳೆ ವಿವರದನ್ವಯ ಚಿತ್ರದುರ್ಗ ಜಿಲ್ಲೆಯಲ್ಲಿ ಸರಾಸರಿ 9.9 ಮಿ.ಮೀ ಮಳೆಯಾಗಿದೆ. ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನಲ್ಲಿ 7.2 ಮಿ.ಮೀ, ಚಿತ್ರದುರ್ಗ ತಾಲ್ಲೂಕಿನಲ್ಲಿ 5.2 ಹಿರಿಯೂರು ತಾಲ್ಲೂಕು 10 ಮಿ.ಮೀ, ಹೊಳಲ್ಕೆರೆ ತಾಲ್ಲೂಕು 9.3 ಮಿ.ಮೀ, ಹೊಸದುರ್ಗ ತಾಲ್ಲೂಕಿನಲ್ಲಿ 20 ಮಿ.ಮೀ ಹಾಗೂ ಮೊಳಕಾಲ್ಮುರು ತಾಲ್ಲೂಕಿನಲ್ಲಿ 6.7 ಮಿ.ಮೀ ಮಳೆಯಾಗಿದೆ. ಹೋಬಳಿವಾರು ಮಳೆ ವಿವರ: ಚಳ್ಳಕೆರೆ ತಾಲ್ಲೂಕಿನ ಚಳ್ಳಕೆರೆಯಲ್ಲಿ 4.6 ಮಿ.ಮೀ, ನಾಯಕನಹಟ್ಟಿ 9.4 ಮಿ.ಮೀ, ಪರಶುರಾಂಪುರ 6 ಮಿ.ಮೀ, ತಳಕು 9 ಮಿ.ಮೀ ಮಳೆಯಾಗಿದೆ. ಚಿತ್ರದುರ್ಗ ತಾಲ್ಲೂಕಿನ ಚಿತ್ರದುರ್ಗದಲ್ಲಿ 5.6 ಮಿ.ಮೀ, ಭರಮಸಾಗರ 5.5 ಮಿ.ಮೀ, ಹಿರೇಗುಂಟನೂರು 5.6 ಮಿ.ಮೀ, ತುರುವನೂರು 3.9 ಮಿ.ಮೀ ಮಳೆಯಾಗಿದೆ. ಹಿರಿಯೂರು ತಾಲ್ಲೂಕಿನ ಹಿರಿಯೂರು 13 ಮಿ.ಮೀ, ಐಮಂಗಲ 8.9 ಮಿ.ಮೀ, ಧರ್ಮಪುರ 9 ಮಿ.ಮೀ, ಜವನಗೊಂಡನಹಳ್ಳಿ 10.4 ಮಿ.ಮೀ ಮಳೆಯಾಗಿದೆ. ಹೊಳಲ್ಕೆರೆ ತಾಲ್ಲೂಕಿನ ಹೊಳಲ್ಕೆರೆಯಲ್ಲಿ 12.4 ಮಿ.ಮೀ, ಬಿ.ದುರ್ಗ 7.4 ಮಿ.ಮೀ, ರಾಮಗಿರಿ 6.9 ಮಿ.ಮೀ, ತಾಳ್ಯ 10.5 ಮಿ.ಮೀ ಮಳೆಯಾಗಿದೆ. ಹೊಸದುರ್ಗ ತಾಲ್ಲೂಕಿನ ಹೊಸದುರ್ಗದಲ್ಲಿ 7.6 ಮಿ.ಮೀ, ಮಾಡದಕೆರೆ 11.3 ಮಿ.ಮೀ, ಮತ್ತೋಡು 41.1 ಮಿ.ಮೀ, ಶ್ರೀರಾಂಪುರ 31.6 ಮಿ.ಮೀ ಮಳೆಯಾಗಿದೆ.

### ಹೆರಿಗೆ ತುರ್ತು ಸಂದರ್ಭ ಎದುರಿಸಲು ಕ್ಷಿಪ್ರ ಕಾರ್ಯಪಡೆ ರಚನೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚನೆ

# ತಾಯಿ ಮತ್ತು ಶಿಶು ಮರಣ ಪ್ರಮಾಣ ತಗ್ಗಿಸಲು ಜಿಲ್ಲಾಧಿಕಾರಿ ನಿರ್ದೇಶನ

» **ಚಿತ್ರದುರ್ಗ**

ಹೆರಿಗೆ ತುರ್ತು ಸಂದರ್ಭದಲ್ಲಿ ಸೂಕ್ತ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆ ಕೈಗಳು ಜಿಲ್ಲಾ ಆಸ್ಪತ್ರೆಯಲ್ಲಿ ಅಗತ್ಯ ತಜ್ಞ ವೈದ್ಯರು ಸೇರಿದಂತೆ ಸಿಬ್ಬಂದಿಗಳ ಕ್ಷಿಪ್ರ ಕಾರ್ಯ ಪಡೆ ತಂಡವನ್ನು ರಚನೆ ಮಾಡಬೇಕು. ಈ ತಂಡ 24*7 ಚಿಕಿತ್ಸೆಗೆ ಲಭ್ಯವಿರಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ರಾಷ್ಟ್ರೀಯ ಆರೋಗ್ಯ ಮಿಷನ್ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಚಿತ್ರದುರ್ಗ ಜಿಲ್ಲೆಯಲ್ಲಿ ರಾಜ್ಯ ಸರಾಸರಿಗಿಂತಲೂ ಹೆಚ್ಚಿಗೆ ತಾಯಿ ಹಾಗೂ ಶಿಶು ಮರಣ ಪ್ರಮಾಣವಿದೆ. ಇದನ್ನು ತಗ್ಗಿಸಬೇಕು. ಜಿಲ್ಲಾ ಆಸ್ಪತ್ರೆಯ ಆಡಳಿತವನ್ನು ಸುಧಾರಿಸಿ, ಎಲ್ಲಾ ವಿಭಾಗಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು. ಹೆರಿಯ ತುರ್ತು ಸಂದರ್ಭದಲ್ಲಿ ರಕ್ತ ನಿಧಿ ಕೇಂದ್ರಗಳು ಹಣ ಹಾಗೂ ಬದಲಿ ರಕ್ತ ನೀಡಲು ಒತ್ತಾಯ ಮಾಡಬಾರದು. ತಾಯಿಂದರ ಮರಣಕ್ಕೆ ರಕ್ತದ ಅಲಭ್ಯತೆ ಕಾರಣವಾಗಿರುವುದು ವಿಷಾದನೀಯ ಸಂಗತಿಯಾಗಿದೆ ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಹೇಳಿದರು.

ವೈದ್ಯರು ಜವಬ್ದಾರಿ ಅರಿತು ಕಾರ್ಯನಿರ್ವಹಿಸಬೇಕು. ತಾಯಿ ಹಾಗೂ ಶಿಶು ಮರಣಗಳು ಜಿಲ್ಲೆಯಲ್ಲಿ ಮರುಳಿಸಬಾರದು. ಜಿಲ್ಲಾ ಆಸ್ಪತ್ರೆಯಲ್ಲಿ ಹೆರಿಗೆ ಸಂದರ್ಭದಲ್ಲಿ ಗರ್ಭಿಣಿಯರ ಸ್ಥಿತಿ ತೀರಾ ಚಿಂತಾಜನಕ ಎನಿಸಿದಾಗ ಇತರೆ ಆಸ್ಪತ್ರೆಗಳಿಗೆ ಶಿಫಾರಸ್ಸು ಮಾಡಲಾಗುತ್ತಿದೆ. ಇದರಿಂದ ಚಿತ್ಸೆಯ ಸುರ್ವಣ ಗಳಿಗೆ ತಪ್ಪಿ ಹೋಗಿ ಗರ್ಭಿಣಿ ತಾಯಂದಿರು ಮರಣ ಹೊಂದುವ ಪರಿಸ್ಥಿತಿ ಎದುರಾಗುತ್ತದೆ. ಇದರ ಬದಲಿಗೆ ಪರಿಸ್ಥಿತಿ ಅವಲೋಕಿ ಮುಂಚಿತವಾಗಿ ಬೆಂಗಳೂರು,ದಾವಣಗೆರೆ, ಬಳ್ಳಾರಿ, ಶಿವಮೊಗ್ಗ ಆಸ್ಪತ್ರೆಗಳಿಗೆ ಶಿಫಾರಸ್ಸು ಮಾಡಬೇಕು. ಹೀಗೆ ಶಿಫಾರಸ್ಸು ಮಾಡುವ ಗರ್ಭಿಣಿಯರನ್ನು ಕೊಂಡಯ್ಯಲು ಪ್ರತ್ಯೇಕ ಆಂಬ್ಯುಲೆನ್ಸ್ ವ್ಯವಸ್ಥೆಯನ್ನು ಜಿಲ್ಲಾ ಆಸ್ಪತ್ರೆಯಿಂದಲೇ ಮಾಡಬೇಕು.

ಆಂಬ್ಯುಲೆನ್ಸ್‌ನಲ್ಲಿ ಎಲ್ಲಾ ಜೀವ ರಕ್ಷಕ ಸಾಧನಗಳೊಂದಿಗೆ ವೈದ್ಯರು ಸಹ ಗರ್ಭಿಣಿಯರೊಂದಿಗೆ ತೆರಳಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ನಿರ್ದೇಶನ ನೀಡಿದರು.

ನಿರ್ಲಕ್ಷ್ಯದಿಂದ ತಾಯಿ ಮರಣ ಉಂಟಾದರೆ ಸಂಬಂಧಪಟ್ಟವರ ವಿರುದ್ಧ ಎ.ಎಫ್.ಐ.ಆರ್ ದಾಖಲಿಸಿ ಕ್ರಿಮಿನಲ್ ಮುಕದ್ದಮೆ ಹೂಡಿ ಕಠಣ ಕ್ರಮ ಕೈಗೊಳ್ಳಾಗುವುದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಎಚ್ಚರಿಕೆ ನೀಡಿದರು.

ಚಿತ್ರದುರ್ಗ ಜಿಲ್ಲೆಯಲ್ಲಿ ಜನವರಿಯಿಂದ ಸೆಪ್ಟಂಬರ್‌ವರೆಗೆ 8934 ಹೆರಿಗೆ ಮಾಡಿಸಲಾಗಿದೆ. ಇದರಲ್ಲಿ 5975 ಹೆರಿಗೆಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಆಗಿವೆ. 2956 ಖಾಸಗಿ ಆಸ್ಪತ್ರೆಯಲ್ಲಿಯಾಗಿವೆ. ಶೇ.100 ರಷ್ಟು ಸಾಂಸ್ಥಿಕ ಹೆರಿಗಳನ್ನು ಮಾಡಲಾಗಿದೆ.

ಒಟ್ಟು 7 ತಾಯಂದಿರ ಮರಣ ಸಂಭಸಿದೆ. ಜಿಲ್ಲೆಯಲ್ಲಿ ತಾಯಿ ಮರಣ ಪ್ರಮಾಣ ಪ್ರತಿ ಲಕ್ಷ ಜನಸಂಖ್ಯೆಗೆ 78.85 ಇದೆ. ಶಿಶು ಮರಣ ಪ್ರಮಾಣ ಪ್ರತಿ ಸಾವಿರ ಶಿಶುಗಳಿಗೆ 13 ಇದೆ.

3060 ಲ್ಯಾಕ್ರೋಸ್ಕೋಫಿ ಹಾಗೂ 7 ವ್ಯಾಸ್ಕೋಟಮಿ ಸಂತಾನಹರಣ ಚಿಕಿತ್ಸೆ ಮಾಡಲಾಗಿದೆ ಎಂದು ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಅಭಿನವ್ ಸಭೆಯಲ್ಲಿ ಮಾಹಿತಿ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರೇಣುಪ್ರಸಾದ್, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ರವೀಂದ್ರ ಸೇರಿದಂತೆ ಆರೋಗ್ಯ ಹಿರಿಯ ವೈದ್ಯಾಧಿಕಾರಿಗಳು, ತಜ್ಞ ವೈದ್ಯರು ಉಪಸ್ಥಿತರಿದ್ದರು.



## ಫಾಸ್ಟ್ ನ್ಯೂಸ್

### ಸಿಟಿ ಇನ್ಸ್ಟ್ಯೂಟ್: ಕರಡು ಮತದಾರರ ಪಟ್ಟಿ ಪ್ರಕಟ

» ಚಿತ್ರದುರ್ಗ

ಚಿತ್ರದುರ್ಗ ಸಿಟಿ ಇನ್ಸ್ಟ್ಯೂಟ್ ಆಡಳಿತ ಮಂಡಳಿಯ ಮುಂದಿನ ಐದು (5) ವರ್ಷಗಳ ಅವಧಿಗೆ ಸಾಮಾನ್ಯ ಚುನಾವಣೆಯನ್ನು ನಿಗಧಿಪಡಿಸಬೇಕಾಗಿದ್ದು, ಈ ಚುನಾವಣೆ ಸಂಬಂಧ 2024ರ ಆಗಸ್ಟ್ 31ರ ಅಂತ್ಯಕ್ಕೆ ಇದ್ದಂತೆ ಅರ್ಹ ಹಾಗೂ ಅನರ್ಹ ಸಾಮಾನ್ಯ ಸದಸ್ಯರ ಕರಡುಪಟ್ಟಿ, ಅರ್ಹ ಅಜೀವ ಹಾಗೂ ಅನರ್ಹ ಅಜೀವ ಸದಸ್ಯರ ಕರಡುಪಟ್ಟಿ ಹಾಗೂ ಮತದಾರರ ಪಟ್ಟಿಯನ್ನು ಸಿದ್ದಪಡಿಸುವಾಗ ಪರಿಗಣಿಸದೇ ಇರುವವರ ಪಟ್ಟಿಗಳ ಕರಡು ಮತದಾರರ ಪಟ್ಟಿಗಳನ್ನು ನೋಡಲ್ ಅಧಿಕಾರಿಗಳು ಹಾಗೂ ಚಿತ್ರದುರ್ಗ ಸಹಕಾರ ಸಂಘಗಳ ಉಪನಿಬಂಧಕರು ಸಲ್ಲಿಸಿದ್ದು, ಈ ಕರಡು ಮತದಾರರ ಪಟ್ಟಿಯನ್ನು ಚಿತ್ರದುರ್ಗ ಸಿಟಿ ಇನ್ಸ್ಟ್ಯೂಟ್ ಸೂಚನಾ ಫಲಕದಲ್ಲಿ ಅ.07ರಂದು ಪ್ರಕಟಿಸಲಾಗಿದೆ. ಕರಡು ಮತದಾರರ ಪಟ್ಟಿಗಳಿಗೆ ಆಕ್ಷೇಪಣೆಗಳು ಇದ್ದಲ್ಲಿ, ಆಕ್ಷೇಪಣೆಗಳನ್ನು ಸಮರ್ಥನೀಯ ದಾಖಲೆಗಳೊಂದಿಗೆ ಸಿಟಿ ಇನ್ಸ್ಟ್ಯೂಟ್ ವ್ಯವಸ್ಥಾಪಕರಿಗೆ ಅಥವಾ ಆಡಳಿತಾಧಿಕಾರಿಗಳಿಗೆ ಲಿಖಿತವಾಗಿ ಇದೇ ಅ.21ರ ಸಂಜೆ 5.30 ರೊಳಗೆ ಸಲ್ಲಿಸುವಂತೆ ಚಿತ್ರದುರ್ಗ ಸಿಟಿ ಇನ್ಸ್ಟ್ಯೂಟ್ ಆಡಳಿತಾಧಿಕಾರಿಗಳು ಸೂಚಿಸಿದ್ದಾರೆ.

### ಕಲ್ಯಾಣ ಸಮಿತಿ ಜಿಲ್ಲಾ ಪ್ರವಾಸ

» ಚಿತ್ರದುರ್ಗ

ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅಧ್ಯಕ್ಷತೆಯ ಕರ್ನಾಟಕ ವಿಧಾನಮಂಡಲ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಇದೇ ಅ.19 ರಂದು ಚಿತ್ರದುರ್ಗ ಜಿಲ್ಲಾ ಪ್ರವಾಸ ಕೈಗೊಳ್ಳಲಿದೆ. ದಾವಣಗೆರೆ ಜಿಲ್ಲೆಯಿಂದ ಚಿತ್ರದುರ್ಗ ನಗರಕ್ಕೆ ಆಗಮಿಸುವ ಸಮಿತಿ, ಅಂದು ಬೆಳಿಗ್ಗೆ 10ಕ್ಕೆ ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಸಮುದಾಯ ಅಭಿವೃದ್ಧಿಗಾಗಿ, ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿರುವ ವಿವಿಧ ಯೋಜನೆ ಹಾಗೂ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಸಭೆ ನಡೆಸಲಿದೆ. ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಜನರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರು ತಮ್ಮ ಮನವಿಗಳನ್ನು ಜಿಲ್ಲಾಧಿಕಾರಿಗಳ ಮುಖಾಂತರ ಸಮಿತಿ ಅಧ್ಯಕ್ಷರಿಗೆ ಸಲ್ಲಿಸಬಹುದಾಗಿದೆ. ಜಿಲ್ಲಾಧಿಕಾರಿಗಳು ಮನವಿಗಳನ್ನು ಅ.19 ರಂದು ಜರುಗುವ ಪ್ರಗತಿ ಪರಿಶೀಲನೆ ದಿನದಂದು ಸಮಿತಿ ಅಧ್ಯಕ್ಷರಿಗೆ ಸಲ್ಲಿಸುವರು. ಸದನ ಸಮಿತಿಯಲ್ಲಿ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ಸೇರಿದಂತೆ ರಾಜ್ಯದ ವಿವಿಧ ವಿಧಾನ ಸಭೆ 20 ಶಾಸಕರು ಇದ್ದಾರೆ ಎಂದು ವಿಧಾನ ಸಭೆ ಸಚಿವಾಲಯದ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ತಿಳಿಸಿದ್ದಾರೆ.

### ವ್ಯಕ್ತಿಗಳು ಕಾಣೆ: ಪತ್ತೆಗೆ ಮನವಿ

» ಚಿತ್ರದುರ್ಗ

ಹೊಳಲ್ಕೆರೆ ತಾಲ್ಲೂಕು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮೂವರು ವ್ಯಕ್ತಿಗಳು ಕಾಣೆಯಾದ ಕುರಿತು ಮೂರು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ. ಗುಂಡೇರಿ ಗ್ರಾಮದ ಲಲಿತಮ್ಮ ಗಂಡ ಲೇ.ವೀರಭದ್ರಪ್ಪ (ಸು.70 ವರ್ಷ) ಮಹಿಳೆ ಕಾಣೆಯಾದ ಕುರಿತು 2023 ನವೆಂಬರ್ 21ರಂದು ಪ್ರಕರಣ ದಾಖಲಾಗಿದೆ. ಕಾಣೆಯಾದ ಲಲಿತಮ್ಮ 5 ಅಡಿ ಎತ್ತರವಿರುತ್ತಾರೆ. ಟಿ.ವಡೇರಹಳ್ಳಿ ಗ್ರಾಮದ ಎಂ.ಆರ್.ಪ್ರಕಾಶ್ ತಂದೆ ಬಿ.ಮರುಳಸಿದ್ದಪ್ಪ(ಸು.45 ವರ್ಷ) ವ್ಯಕ್ತಿ ಕಾಣೆಯಾದ ಕುರಿತು 2024 ಮೇ 21ರಂದು ಪ್ರಕರಣ ದಾಖಲಾಗಿದೆ. ಕಾಣೆಯಾದ ಎಂ.ಆರ್.ಪ್ರಕಾಶ್ 5.5 ಅಡಿ ಎತ್ತರ, ಕೋಲು ಮುಖ, ಸಾಧಾರಣ ಮೈಕಟ್ಟು, ಗೋಧಿ ಮೈಬಣ್ಣ ಹೊಂದಿದ್ದು, ಬಲಗೈ ಹೆಬ್ಬೆಟ್ಟಿನಲ್ಲಿ ಹಳೇ ಗಾಯದ ಕಲೆ ಇದ್ದು, ಕನ್ನಡ ಬಾಷೆಯನ್ನು ಮಾತನಾಡುವರು. ರಾಮಗಿರಿ ಗ್ರಾಮದ ಜನತಾ ಕಾಲೋನಿ ನಿವಾಸಿ ಕಾಂತರಾಜ್ ತಂದೆ ಲೇ. ಶಿವರುದ್ರಪ್ಪ (ಸು.47 ವರ್ಷ) ಕಾಣೆಯಾದ ಕುರಿತು 2024 ಸೆಪ್ಟಂಬರ 20ರಂದು ಪ್ರಕರಣ ದಾಖಲಾಗಿದೆ. ಕಾಣೆಯಾದ ಕಾಂತರಾಜ್ ಸು.5 ಅಡಿ ಎತ್ತರ, ಸಾಧಾರಣ ಮೈಕಟ್ಟು, ಕೋಲು ಮುಖ, ಎಣ್ಣೆಗೆಂಪು ಮೈಬಣ್ಣ, ತಲೆಯಲ್ಲಿ ಕಪ್ಪು ಕೂದಲು ಇವೆ. ಈ ಮೇಲ್ಕಂಡ ಕಾಣೆಯಾದ ವ್ಯಕ್ತಿಗಳ ಮಾಹಿತಿ ತಿಳಿದು ಬಂದಲ್ಲಿ ಹೊಳಲ್ಕೆರೆ ಪೊಲೀಸ್ ಠಾಣೆಯನ್ನು ಸಂಪರ್ಕಿಸಿ.

### ಉದ್ಯಮಶೀಲತೆ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿ

» ಚಿತ್ರದುರ್ಗ

ಭಾರತೀಯ ವಿಜ್ಞಾನ ಸಂಸ್ಥೆ, ವಿಜ್ಞಾನ ತಂತ್ರಜ್ಞಾನ ಮತ್ತು ನಾವಿನ್ಯತ ಕೇಂದ್ರ (ಎಸ್‍ಟಿಐ ಹಬ್) ಹಾಗೂ ಸೊಸೈಟಿ ಫಾರ್ ಇನ್ನೋವೇಷನ್ ಅಂಡ್ ಡೆವಲಪ್‍ಮೆಂಟ್ (ಎಸ್‍ಐಡಿ), ಸಹಯೋಗದಲ್ಲಿ ಚಳ್ಳಕೆರೆ ತಾಲ್ಲೂಕಿನ ಕುದಾಪುರ ಭಾರತೀಯ ವಿಜ್ಞಾನ ಸಂಸ್ಥಾನ ಆವರಣದಲ್ಲಿ ನವೆಂಬರ್ 6 ರಿಂದ 9 ರವರೆಗೆ ಉದ್ಯಮಶೀಲತೆ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಗಾರವನ್ನು ಆಯೋಜಿಸಲಾಗಿದೆ. 6 ದಿನಗಳ ತರಬೇತಿಯಲ್ಲಿ ಹೊಸ ಉದ್ಯಮವನ್ನು ಆರಂಭಿಸಲು ಆಸಕ್ತಿ ಇರುವವರಿಗಾಗಿ ಉದ್ಯಮಶೀಲತೆ ಮತ್ತು ಕೌಶಲ್ಯಾಭಿವೃದ್ಧಿ ಕುರಿತು ತರಬೇತಿ ನೀಡಲಾಗುವುದು. ಆಸಕ್ತ ಅಭ್ಯರ್ಥಿಗಳು ಅ.23ರ ಒಳಗೆ ತಮ್ಮ ಹೆಸರನ್ನು ಮೊ. 8970582703, ಕೋಟೇಶ್ ಮೊ.9743675646 ಗೆ ಕರೆ ಮಾಡಿ ನೊಂದಾಯಿಸಿಕೊಳ್ಳಬಹುದು.

# ಸಹಜ ಕೃಷಿ–ಸಂತೃಪ್ತ ಜೀವನಕ್ಕೆ ದಾರಿ ಕಾರ್ಯಾಗಾರ

» ಚಿತ್ರದುರ್ಗ



ಜಿಲ್ಲಾ ಕೃಷಿ ತರಬೇತಿ ಕೇಂದ್ರ ಹಾಗೂ ದಾವಣಗೆರೆ ಐಕಾಂತಿಕ ಸಮುದಾಯ ಸಹಯೋಗದಲ್ಲಿ ಹಿರಿಯೂರು ತಾಲ್ಲೂಕು ಬಬ್ಬೂರು ಫಾರಂನಲ್ಲಿ ಜಿಲ್ಲೆಯ ರೈತರಿಗೆ ಸಹಜ ಕೃಷಿ – ಸಂತೃಪ್ತ ಜೀವನಕ್ಕೆ ದಾರಿ ಎಂಬ ವಿಷಯದ ಕುರಿತು ಮೂರು ದಿನದ ತರಬೇತಿ ಕಾರ್ಯಗಾರವನ್ನು ಸೋಮವಾರ ಉದ್ಘಾಟನೆ ಮಾಡಲಾಯಿತು.

ಅ.15 ರಿಂದ ಅ.17 ವರೆಗೆ ನಡೆಯುವ ಕಾರ್ಯಗಾರದ ನಡೆಯಲಿದೆ. ಉದ್ಘಾಟನೆ ಕಾರ್ಯಕ್ರಮದಲ್ಲಿ ದಾವಣಗೆರೆಯ ಐಕಾಂತಿಕ ತೋಟದ ರಾಘವ ಅವರು ನಮ್ಮ ಸುತ್ತಲಿನ ಪ್ರಪಂಚದಲ್ಲಿ ಪ್ರಸ್ತುತ ಆಗು ಹೋಗುಗಳು – ಕುಟುಂಬದ ಆರ್ಥಿಕತೆ, ದೇಶ ಮತ್ತು ಪ್ರಪಂಚದ ಆರ್ಥಿಕತೆ ಕುರಿತು ವಿಷಯ ಮಂಡನೆ ಮಾಡನೆ ಮಾಡಿದರು.

ಸಹಜ ಜೀವನ ಶೈಲಿಯ ನಿಜವಾದ ಆಹಾರ, ನೈಸರ್ಗಿಕ ಆರೋಗ್ಯ ಚಿಕಿತ್ಸಾ ಪರಿಹಾರಗಳು, ನೈಸರ್ಗಿಕ ಕಟ್ಟಡ, ಸ್ವಚ್ಛತೆಯ ಸಹಜ ವಸ್ತುಗಳ ಕುರಿತು ರೈತಬಾಂಧವರಿಗೆ ಮನದಟ್ಟು ಮಾಡಿಕೊಟ್ಟರು. ಸಹಜ ಕೃಷಿ ಅಳವಡಿಸಿ ಯಶಸ್ವಿಯಾದ ಐಕಾಂತಿಕ ಸಮುದಾಯದ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ವಿವಿಧ ಭಾಗದ ಪ್ರಗತಿಪರ ಸಹಜ ಕೃಷಿಕರ ಯಶೋಗಾಥೆಗಳನ್ನು ಮತ್ತು ಜಪಾನಿನ ಸಹಜ ಕೃಷಿಯ ಹರಿಕಾರರಾದ ಶ್ರೀ ಮಸನೊಬು ಫುಕುವೋಕ ಅವರ ಸಹಜ ಕೃಷಿಯ ಅನುಭವಗಳ ಚಿತ್ರಗಳು ಹಾಗೂ ದೃಶ್ಯಗಳನ್ನು ರಾಘವವರು ರೈತರೊಂದಿಗೆ ಹಂಚಿಕೊಂಡರು.

ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕ ರಜನೀಕಾಂತ. ಆರ್ ಇವರು ರೈತರನ್ನು ಮತ್ತು ಆಗಮಿಸಿದ ಐಕಾಂತಿಕ ಸಮುದಾಯದ ಪ್ರಗತಿಪರ ಸಹಜ ಕೃಷಿಕರನ್ನು ಸ್ವಾಗತಿಸಿ ಪ್ರಸ್ತುತ ಸಹಜ ಜೀವನ ಮತ್ತು ಸಹಜ ಕೃಷಿಯ ಅನಿವಾರ್ಯತೆ ಕುರಿತು ಪ್ರಸ್ತಾವಿಕವಾಗಿ ಮಾತನಾಡಿದರು.

ಮೊದಲ ದಿನದ ಕಾರ್ಯಾಗಾರದಲ್ಲಿ ಐಕಾಂತಿಕ ಸಮುದಾಯದ ಅಭಿಷೇಕ್‍ಅವರು ದಿನ ನಿತ್ಯ ಜೀವನದಲ್ಲಿ ಬಳಸುವ ಪ್ಲಾಸ್ಟಿಕ್ ನಿಂದ ಆಗುವ ದುಷ್ಪರಿಣಾಮ ಕುರಿತು ಅರಿವು ಮೂಡಿಸುತ್ತಾ ಪರ್ಯಾಯ ಕ್ರಮಗಳ ಕುರಿತು ಮಾಹಿತಿ ನೀಡಿದರು. ಪಾಂಡುರಂಗ ಅವರು ನೈಸರ್ಗಿಕ ಉಡುಪು ಹಾಗೂ ಬರಿಗಾಲಿನ ನಡಿಗೆಯಿಂದ ಆಗುವ ಅನುಕೂಲತೆಯನ್ನು ವಿವರಿಸಿದರು.

ನಿರಂಜನ್ ಅವರು ಕೃಷಿಯು ಬೆಳೆದು ಬಂದ ಹಾದಿಯ ಕುರಿತು ವಿವರಿಸುತ್ತಾ ಭೂಗೋಳದಲ್ಲಿ ಮಣ್ಣು, ಸಸ್ಯರಾಶಿ, ಜೀವರಾಶಿ ಹಾಗೂ ಈ ಮೂರರ ಸಮತೋಲನ ವ್ಯವಸ್ಥೆ ಕುರಿತು ತಿಳಿಸಿದರು. ಸುಜಿತ್ ಮತ್ತು ಪಾಂಡುರಂಗಚಾರಿ ಅವರು ಪ್ರಸ್ತುತ ಇರುವ ತೋಟವನ್ನು ಸಹಜ ಕೃಷಿ ಅಳವಡಿಸಿ ಉತ್ತಮಪಡಿಸುವ ವಿಚಾರಗಳನ್ನುತಿಳಿಸಿದರು.ವೀರೇಶ್‍ಅವರು ಸಜೀವ ಮಣ್ಣಿನ ಪ್ರಾಮುಖ್ಯತೆ ಕುರಿತು ರೈತರಲ್ಲಿ ವಿಷಯ ಪ್ರಸ್ತಾಪಿಸಿದರು.

ನಂತರ ರೈತರಲ್ಲಿ ಉದ್ಭವಿಸಿದ ವಿವಿಧ ಪ್ರಶ್ನೆ ಸಂದೇಹಗಳ ಬಗ್ಗೆ ಚರ್ಚಾ ಗೋಷ್ಠಿ ನಡೆಸಲಾಯಿತು. ಕಾರ್ಯಗಾರಕ್ಕೆ ಹಾಜರಾದ ಆಸಕ್ತ 60 ಜನ ರೈತರಿಗೆ ಗಾಣದಿಂದ ತೆಗೆದ ಶುದ್ಧ ಕೊಬ್ಬರಿ ಎಣ್ಣೆ, ವಿಷಮುಕ್ತವಾಗಿ ಬೆಳೆದ ಕಂದು ಬಣ್ಣದ ಅಕ್ಕಿ, ಕೆಂಪಕ್ಕಿ ಮತ್ತು ಸಿರಿಧಾನ್ಯಗಳಿಂದ ತಯಾರಿಸಿದ ಸಾತ್ವಿಕ ಆಹಾರ, ರಾಗಿ ಅಂಬಲಿ ಮತ್ತು ಕಷಾಯವನ್ನು ನೀಡಲಾಯಿತು.

ವ್ಯಾಪಕ ಪತ್ತೆ ಕಾರ್ಯಕೈಗೊಳ್ಳಲು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚನೆ

# ನ.4 ರಿಂದ ಕುಷ್ಠರೋಗ ಪತ್ತೆ ಆಂದೋಲನ

» ಚಿತ್ರದುರ್ಗ



ನವೆಂಬರ್ 4 ರಿಂದ 21 ವರೆಗೆ ಜಿಲ್ಲೆಯಾದ್ಯಂತ ನಡೆಯಲಿರುವ ಕುಷ್ಠರೋಗ ಪತ್ತೆ ಆಂದೋಲನದಲ್ಲಿ ಪ್ರತಿ ಮನೆ ಮನೆಗಳಿಗೂ ತೆರಳಿ ವ್ಯಾಪಕವಾಗಿ ಪತ್ತೆ ಕಾರ್ಯಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚನೆ ನೀಡಿದರು.


ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಕುಷ್ಠರೋಗ ಪತ್ತೆ ಹಚ್ಚುವ ಆಂದೋಲನ–2024ರ ಜಿಲ್ಲಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಪ್ಪದೇ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಸಮನ್ವಯ ಸಮಿತಿ ಸಭೆಯನ್ನು ನಡೆಸಬೇಕು. ವ್ಯಾಪಕ ಪ್ರಚಾರ ಕೈಗೊಳ್ಳುವ ಮೂಲಕ ಕುಷ್ಠರೋಗ ಪತ್ತೆ ಆಂದೋಲನದ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು.

ಕುಷ್ಠರೋಗದ ಬಗ್ಗೆ ಸಮಾಜದಲ್ಲಿ ಕಳಂಕ ಮನೋಭಾವವಿದೆ. ಆದ್ದರಿಂದ ಪತ್ತೆ ಆಂದೋಲನದ ವೇಳೆ ಜನರು ರೋಗದ ಬಗ್ಗೆ ಮುಚ್ಚಿಡುವ ಸಾಧ್ಯತೆ ಇರುತ್ತದೆ. ಆರೋಗ್ಯ ಸಹಾಯಕರು ಹಾಗೂ ಆಶಾ ಕಾರ್ಯಕರ್ತೆಯರಿಗೆ ರೋಗ ಲಕ್ಷಣಗಳ ಬಗ್ಗೆ ಮಾಹಿತಿ ನೀಡಿ, ಪತ್ತೆ ಹಚ್ಚುವ ಕುರಿತು ತರಬೇತಿ ಕಾರ್ಯಗಾರ ಆಯೋಜಿಸಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ನಿರ್ದೇಶಿಸಿದರು.

ಜಿಲ್ಲೆಯಲ್ಲಿ ಒಟ್ಟು ಸೆಪ್ಟೆಂಬರ್ ತಿಂಗಳಿನಲ್ಲಿ 42 ಕುಷ್ಠರೋಗ ಪ್ರಕರಣಗಳು ಪತ್ತೆಯಾಗಿವೆ. ರೋಗ ಬಂದವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. 2018–19 ರಿಂದ 2023–24ವರೆಗೆ ಒಟ್ಟು 421 ಕುಷ್ಠರೋಗ ಪ್ರಕರಣಗಳನ್ನು ಕಂಡುಹಿಡಿಯಲಾಗಿದೆ. ನವೆಂಬರ್ 4 ರಿಂದ 21 ವರೆಗೆ ಜರುಗುವ ಆಂದೋಲನದಲ್ಲಿ ಜಿಲ್ಲೆಯಾದ್ಯಂತ 361358 ಮನೆಗಳ ಪತ್ತೇ ಸರ್ವೆ ಕೈಗೊಳ್ಳಲು ಗುರಿ ನಿಗಧಿ ಮಾಡಲಾಗಿದೆ. ಇದಕ್ಕಾಗಿ 1291 ತಂಡಗಳನ್ನು ಅಗತ್ಯವಿದ್ದು 2581 ತಂಡಗಳ ರಚನೆ ಮಾಡಲಾಗಿದೆ. ಈ ತಂಡಗಳ ಮೇಲೆ 129 ಮೇಲ್ವಿಚಾರಕರನ್ನು ನೇಮಕಮಾಡಲಾಗಿದೆ ಎಂದು ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿ ಡಾ.ನಾಗರಾಜ್ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರೇಣುಪ್ರಸಾದ್, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಅಭಿನವ್ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ರವೀಂದ್ರ ಸೇರಿದಂತೆ ತಾಲ್ಲೂಕು ಆರೋಗ್ಯಾಧಿಕಾರಿಗಳು ಉಪಸ್ಥಿತರಿದ್ದರು.



ನಾಡಿನ ಖ್ಯಾತ ಕಥೆಗಾರ ವಸುಧೇಂದ್ರ ರವರು ನಗರದ ಡಯಾನಾ ಬುಕ್ ಗ್ಯಾಲರಿಗೆ ಭೇಟಿ ನೀಡಿ, ಓದುಗರೊಂದಿಗೆ ಸಂವಹನ ನಡೆಸಿದರು.. ಈ ಸಂದರ್ಭದಲ್ಲಿ ಬುಕ್ ಗ್ಯಾಲರಿಯ ಮಾಲೀಕರಾದ ಕೆ. ಎಲ್. ಈಶ್ವರ್ ಅವರು ಜೋಳಿಗೆ ಪವಾಡ ಪುಸ್ತಕ ನೀಡಿ ಗೌರವಿಸಿದರು.. ಈ ವಿಷಯವನ್ನು ಸುದ್ದಿ ರೂಪದಲ್ಲಿ ಪ್ರಕಟಿಸಿ , ಕನ್ನಡ ಸಾಹಿತಿಗಳಿಗೆ ಪ್ರೋತ್ಸಾಹಿಸಿ.

# 6 ಮತಗಟ್ಟೆಗಳ ಸ್ಥಳ, 34 ಮತಗಟ್ಟೆಗಳ ಹೆಸರು ಪರಿಷ್ಕರಣೆ

» ಚಿತ್ರದುರ್ಗ



ಜಿಲ್ಲೆಯ 6 ಮತಗಟ್ಟೆಗಳ ಸ್ಥಳ ಹಾಗೂ 34 ಮತಗಟ್ಟೆಗಳ ಹೆಸರು ಪರಿಷ್ಕರಣೆಗೆ ಭಾರತ ಚುನಾವಣಾ ಆಯೋಗ ಅನುಮೋದನೆ ನೀಡಿದೆ ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ತಿಳಿಸಿದರು. ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ವಿಶೇಷ ಸಂಕ್ಷಿಪ್ತ ಮತದಾರ ಪಟ್ಟಿ ಪರಿಷ್ಕರಣೆ ಕುರಿತು ವ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆ ನಡೆಸಿ ಅವರು ಮಾತನಾಡಿದರು.

ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ 2025 ಸಂಬಂಧ ಜಿಲ್ಲೆಯ ರ್‍ಯಾಷನಲೈಜೇಷನ್ ಆಫ್ ಪೋಲಿಂಗ್ ಸ್ಟೇಷನ್ ಪಟ್ಟಿ ಪ್ರಕಟಿಸಲಾಗಿದೆ. ಈ ಪಟ್ಟಿಯನ್ನು ಎಲ್ಲಾ ರಾಜಕೀಯ ಪಕ್ಷಗಳ ಏಜಂಟರುಗಳಿಗೆ ನೀಡಲಾಗುವುದು ಎಂದು ಅವರು ತಿಳಿಸಿದರು. ಜಿಲ್ಲೆಯಲ್ಲಿ ಒಟ್ಟು 1661 ಮತಗಟ್ಟೆಗಳು ಇದ್ದು, ಮೊಳಕಾಲ್ಮೂರು ಕ್ಷೇತ್ರದಲ್ಲಿ 285, ಚಳ್ಳಕೆರೆ 260, ಚಿತ್ರದುರ್ಗ 288, ಹಿರಿಯೂರು 287, ಹೊಸದುರ್ಗ 242 ಹಾಗೂ ಹೊಳಲ್ಕೆರೆ 299 ಮತಗಟ್ಟೆಗಳು ಇವೆ. ಈ ಪೈಕಿ ಚಿತ್ರದುರ್ಗ ವಿಧಾನ ಸಭಾ ಕ್ಷೇತ್ರದಲ್ಲಿ ಮಾತ್ರ 6 ಮತಗಟ್ಟೆಗಳ ಸ್ಥಳ ಬದಲಾವಣೆ ಹಾಗೂ 34 ಮತಗಟ್ಟೆಗಳ ಹೆಸರುಗಳನ್ನು ಸರಿಪಡಿಸಿ ಪ್ರಕಟಿಸಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಸಭೆಯಲ್ಲಿ ಮಾಹಿತಿ ನೀಡಿದರು.ಕಾಂಗ್ರೆಸ್ ಪಕ್ಷದಡಿ.ಎನ್.ಮೈಲಾರಪ್ಪ, ಜೆಡಿಎಸ್ ಪಕ್ಷದ ಡಿ.ಗೋಪಾಲಸ್ವಾಮಿ ನಾಯಕ, ಸಿಪಿಐ ಪಕ್ಷದ ಗೌಸ್ ಪೀರ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಚಳ್ಳಕೆರೆ ತಾಲ್ಲೂಕಿನ ನರಹರಿ ನಗರದ ಹಾಲುಒಕ್ಕೂಟ ಕೇಂದ್ರದಲ್ಲಿ ಜಿಲ್ಲಾ ನಿರ್ದೇಶಕ ಬಿ.ಸಿ.ಸಂಜೀವಮೂರ್ತಿ ಕುಟುಂಬದ ಸದಸ್ಯರಿಗೆ ಚೆಕ್ ವಿತರಿಸಿದರು.

## ಪ್ರಮುಖ ಸುದ್ದಿ

# ನೂರು ಕೋಟಿ ಸಸಿ ನೆಡುವ ಯೋಜನೆ; ಸಂಸದೆ ಚಾಲನೆ

» ದಾವಣಗೆರೆ



ಕ್ಲೌಡ್ ಸ್ಟೇಜ್ ಸಂಸ್ಥೆಯೂ ಟ್ಯಾಪ್ ಆನ್ ಕಾರ್ಡ್ಸ್ ಯೋಜನೆಯಡಿ ಭಾರತ ದೇಶಾದ್ಯಾಂತ ನೂರು ಕೋಟಿ ಸಸಿ ನೆಡುವ ಮಹತ್ವದ ಯೋಜನೆಗೆ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ರವರು ಚಾಲನೆ ನೀಡಿದರು.

ವೈಯಕ್ತಿಕ ವಿವರದ ಮಾಹಿತಿ ಹೊಂದಿರುವ ಟ್ಯಾಪ್ ಆನ್ ಡಿಜಿಟಲ್ ಕಾರ್ಡ್ ಬಿಡುಗಡೆಗೊಳಿಸಿ, ಸಸಿ ನೆಡುವ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು, ಒಂದು ಟ್ಯಾಪ್ ಆನ್ ಕಾರ್ಡ್ ಪಡೆದರೆ ಅದರ ಜೊತೆ ಒಂದು ಸಸಿ ನೆಟ್ಟು ಪೋಷಣೆ ಮಾಡುವುದು ಜಾಗತಿಕ ಪರಿಸರ ಸಂರಕ್ಷಣೆ ಮಹತ್ವದ ಜವಾಬ್ದಾರಿಯನ್ನು ಕ್ಲೌಡ್ ಸ್ಟೇಜ್ ಸಂಸ್ಥೆಯು ತೆಗೆದುಕೊಂಡಿರುವುದು ಸಾಮಾನ್ಯ ವಿಷಯವಲ್ಲ ಇದೊಂದು ದೂರ ದೃಷ್ಟಿಯ ಮಹತ್ವದ ಯೋಜನೆಯಾಗಿದೆ ಎಂದರು.

ದಾವಣಗೆರೆ ಜಿಲ್ಲೆಯನ್ನು ಹಸಿರುಕರಣ ಮಾಡುವ ನನ್ನ ಕನಸಿಗೆ ಇದು ಒಂದು ಪೂರಕ ಕಾರ್ಯಕ್ರಮವಾಗಿದ್ದು ಇದಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ ಎಂದು ಡಾ. ಪ್ರಭಾ ಮಲ್ಲಿಕಾರ್ಜುನ್ ರವರು ತಿಳಿಸಿದರು.

ಇದೇವೇಳೆ ಮಾತನಾಡಿದ ಕ್ಲೌಡ್ ಸ್ಟೇಜ್ ನ ನಿರ್ದೇಶಕರಾದ ಕು.ಕಾವ್ಯಶ್ರೀ ಅವರು ಇತ್ತೀಚಿಗೆ ಅರಣ್ಯ ನಾಶವಾಗುತ್ತಿದ್ದು ಜಾಗತಿಕ ಮಟ್ಟದಲ್ಲಿ ಕಾಡನ್ನು ಉಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಈ ಹಿನ್ನೆಲೆ ನಮ್ಮ ಸಂಸ್ಥೆಯ ವತಿಯಿಂದ ಟ್ಯಾಪ್ ಆನ್ ಕಾರ್ಡ್ಸ್ ಪರಿಚಯಿಸುವ ಜೊತೆಗೆ ನೂರು ಕೋಟಿ ಸಸಿ ನೆಡುವ ಕಾರ್ಯಕ್ರಮವನ್ನು ಜಾರಿಗೊಳಿಸಿದೆ ಎಂದರು.

ಈ ಒಂದು ಟ್ಯಾಪ್ ಆನ್ ಡಿಜಿಟಲ್ ಕಾರ್ಡ್ ಪಡೆದರೆ ನಾವೇ ಒಂದು ಸಸಿ ನೆಟ್ಟು ಅದರ ಪೋಷಣೆಯನ್ನು ಮಾಡುತ್ತೇವೆ ,ಸಸಿ ನೆಡುವ ಬಗ್ಗೆ ಈಗಾಗಲೇ ಅರಣ್ಯ ಇಲಾಖೆ ಜೊತೆ ಚರ್ಚೆ ಕೂಡ ಮಾಡಿದ್ದು ಈ ಮೂಲಕ ಭಾರತ ದೇಶವನ್ನು ಹಸಿರೀಕರಣ ಮಾಡುತ್ತೇವೆ ಎಂದು ಟ್ಯಾಪ್ ಆನ್ ಕಾರ್ಡ್ಸ್ ಯೋಜನಾ ಮತ್ತು ತಾಂತ್ರಿಕ ನಿರ್ದೇಶಕರಾದ ಶ್ರೀ ಸಚಿನ್ ಅವರು ತಿಳಿಸಿದರು.

ತಾಪಮಾನ ವೈಪರೀತ್ಯದಿಂದ, ಪರಿಸರ ನಾಶದಿಂದ ಸಾಕಷ್ಟು ಸಮಸ್ಯೆಗಳು ಎದುರಾಗುತ್ತಿವೆ ಈ ಕಾರಣ ಟ್ಯಾಪ್ ಆನ್ ಕಾರ್ಡ್ಸ್ ಮೂಲಕ ಮರು ಅರಣ್ಯೀಕರಣ ಮಾಡುವುದು ನಮ್ಮ ಸಂಸ್ಥೆ ಉದ್ದೇಶವಾಗಿದೆ ಇದರ ಯಶಸ್ವಿಗೆ ಸಂಘ ಸಂಸ್ಥೆ ಸೇರಿದಂತೆ ಎಲ್ಲರೂ ಕೈ ಜೋಡಿಸಬಹುದೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಕ್ಲೌಡ್ ಸ್ಟೇಜ್‌ನ ನಿರ್ದೇಶಕರು ಶ್ರೀದೇವಿ ಸೇರಿದಂತೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಫಾಸ್ಟ್ ನ್ಯೂಸ್

## ಐವರಿಗೆ ಮಹರ್ಷಿ ವಾಲ್ಮೀಕಿ ಪ್ರಶಸ್ತಿ

### ಚಿತ್ರದುರ್ಗ ಜಿಲ್ಲೆಯ ಕಿಲಾರಿ ಜೋಗಯ್ಯ ವಾಲ್ಮೀಕಿ ಪ್ರಶಸ್ತಿ

» ನಮ್ಮಜನ.ಸಮಾಚಾರ,

ಚಿತ್ರದುರ್ಗ: ರಾಜ್ಯದಲ್ಲಿ ಪ್ರತಿ ವರ್ಷ ಸೀಗೆಹುಣ್ಣಿಮೆ ದಿನದಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಗುತ್ತದೆ. ಡಾ. ಬಿ.ಆರ್.ಅಂಬೇಡ್ಕರ್, ಡಾ. ಬಾಬು ಜಗಜೀವನರಾಂ ಹಾಗೂ ಶ್ರೀ ಡಿ.ದೇವರಾಜ ಅರಸು ಇವರ ಸ್ಮರಣಾರ್ಥ ಅರ್ಹ ವ್ಯಕ್ತಿಗಳಿಗೆ ಪ್ರಶಸ್ತಿ ನೀಡುತ್ತಿರುವ ಮಾದರಿಯಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯಂದು ಪರಿಶಿಷ್ಟ ವರ್ಗದ ಜನಾಂಗದ ಏಳಿಗೆಗಾಗಿ ಶ್ರಮಿಸಿದ ವ್ಯಕ್ತಿಗಳಿಗೆ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿಯನ್ನು ಶೈಕ್ಷಣಿಕ, ಸಾಮಾಜಿಕ, ಸಾಹಿತ್ಯ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿರುವಂತಹ ಬೆಂಗಳೂರು, ಮೈಸೂರು, ಬೆಳಗಾವಿ, ಕಲಬುರಗಿ ಕಂದಾಯ ವಿಭಾಗಗಳು ಹಾಗೂ ಬೆಂಗಳೂರು ಕೇಂದ್ರ ಸ್ಥಾನದಿಂದ ತಲಾ ಒಬ್ಬರಂತೆ ಒಟ್ಟು ಐದು ಸಾಧಕರಿಗೆ ನಗದು ಮೊತ್ತ ಹಾಗೂ ಬಂಗಾರದ ಪದಕಗಳ ಮೌಲ್ಯವನ್ನು ಐದು ಪ್ರಶಸ್ತಿ ನೀಡಲು ಆಯ್ಕೆ ಮಾಡಲಾಗಿದೆ.2024–25ನೇ ಸಾಲಿಗೆ ಶ್ರೀ ಮಹರ್ಷಿ ವಾಲ್ಮೀಕಿ ಇವರ ಸ್ಮರಣಾರ್ಥ ನೀಡುವ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ವಿವಿಧ ಕ್ಷೇತ್ರಗಳಲ್ಲಿ ಸಾಧಕರನ್ನು ಆಯ್ಕೆ ಮಾಡುವ ಸಂಬಂಧ ಕೆ.ಹೆಚ್.ಮಲ್ಲೇಶಪ್ಪ.. ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ನಾಗರಬಾವಿ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗಿರುತ್ತು.ಸರ್ಕಾರವು ಎಲ್ಲಾ ಅಂಶ ಪರಿಶೀಲಿಸಿ, 2024ನೇ ಸಾಲಿನ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ಆಯ್ಕೆ ಸಮಿತಿಯು ಆಯ್ಕೆ ಮಾಡಿರುವ ಒಟ್ಟು 05 ಸಾಧಕರಿಗೆ ಪ್ರಶಸ್ತಿಯನ್ನು ನೀಡಲಾಗುತ್ತಿದೆ.ಸಭೆಯಲ್ಲಿ ನಿರ್ಣಯಿಸಿರುವಂತೆ, 2024ನೇ ಸಾಲಿಗೆ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿಯನ್ನು ಕ್ಷೇತ್ರವಾರು ಈ ಕೆಳಕಂಡ 05 ಸಾಧಕರಿಗೆ ರಾಜ್ಯ ಮಟ್ಟದ ಶ್ರೀ ಮಹರ್ಷಿ ವಾಲ್ಮೀಕಿ ಪುರಸ್ಕಾರ ಪ್ರಶಸ್ತಿಯನ್ನು ನೀಡಿ, ಗೌರವಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

**ಐದು ಜನರ ಸಾಧಕರ ಪಟ್ಟಿ**

- **ಕಿಲಾರಿ ಜೋಗಯ್ಯ ಬಿನ್ ಕಿಲಾರಿ ಬೋರಯ್ಯ. ಗಡ್ಡದಾರ ಹಟ್ಟಿ, ನನ್ನಿವಾಳ ಅಂಚೆ ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ (ಬುಡಕಟ್ಟು ಸಂಸ್ಕೃತಿ ಕ್ಷೇತ್ರ)**
- **ಡಾ. ರತ್ನಮ್ಮ.ಎಸ್., ಮದ್ದೂರು ಕಾಲೋನಿ, ಮದ್ದೂರು ಪೋಸ್ಟ್, ಹಂಗಳ ಹೋಬಳಿ, ಗುಂಡ್ಲುಪೇಟೆ ಚಾಮರಾಜನಗರ ಜಿಲ್ಲೆ (ಸಮಾಜ ಸೇವೆ)**
- **ರಾಜಶೇಖರ ತಳವಾರ, ನಂ.63/ಎ, 3ನೇ ಕ್ರಾಸ್, ದೀಪಕ ಗಲ್ಲಿ, ಗಾಂಧಿನಗರ, ಬೆಳಗಾವಿ (ಸಾಮಾಜಿಕ ಕ್ಷೇತ್ರ)**
- **ಕೆ.ಎಸ್. ಮೃತ್ಯುಂಜಯ, ನಂ.14/10, ಮಾಗಡಿ ಮುಖ್ಯರಸ್ತೆ, ಬೆಂಗಳೂರು. (ಸಾಮಾಜಿಕ ಕ್ಷೇತ್ರ)**
- **ರತ್ನಮ್ಮ , ಬಿ.ಸೋಗಿ, ನಂ. 20.921/1, ಕಾಲೋನಿ, ಹರಪನಹಳ್ಳಿ, ವಿಜಯನಗರ ಜಿಲ್ಲೆ (ರಂಗ ಭೂಮಿ ಕ್ಷೇತ್ರ)**

## ವಾಲ್ಮೀಕಿ ಜಯಂತಿ: ಅಧಿಕಾರಿ ಹಾಗೂ ಸಿಬ್ಬಂದಿ ಹಾಜರಿ ಕಡ್ಡಾಯ

» ಚಿತ್ರದುರ್ಗ

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ನಗರಸಭೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಇದೇ ಅ.17 ರಂದು ಮಧ್ಯಾಹ್ನ 12 ಗಂಟೆಗೆ ನಗರದ ತ.ರಾ.ಸು ರಂಗಮಂದಿರದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಜಯಂತಿಯ ಅಂಗವಾಗಿ ಬೆಳಿಗ್ಗೆ 10 ಗಂಟೆಗೆ ನಗರದ ಐತಿಹಾಸಿಕ ಕೋಟೆ ಮುಂಭಾಗದಿಂದ ಮದಕರಿ ನಾಯಕ ವೃತ್ತದವರೆಗೆ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮಗಳಿಗೆ ಜಿಲ್ಲೆಯ ಎಲ್ಲಾ ಇಲಾಖೆ ಹಾಗೂ ನಿಗಮ ಮಂಡಳಿಗಳ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಕಡ್ಡಾಯವಾಗಿ ಹಾಜರಾಗುವಂತೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚನೆ ನೀಡಿದ್ದಾರೆ.

## ಸಂತ್ರಸ್ತ ಮಕ್ಕಳ ಬೆಂಬಲ ವ್ಯಕ್ತಿಗಳ ಸೇವೆಗೆ ಅರ್ಜಿ

» ಚಿತ್ರದುರ್ಗ

ಪೋಕ್ಸೋ ಕಾಯ್ದೆ ಅನ್ವಯ ಸಂತ್ರಸ್ತ ಮಕ್ಕಳಿಗೆ ಬೆಂಬಲ ವ್ಯಕ್ತಿಗಳಾಗಿ ಸೇವೆ ಸಲ್ಲಿಸಲು ಅರ್ಹ ವ್ಯಕ್ತಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಕನಿಷ್ಠ 3 ವರ್ಷಗಳ ಅನುಭವದೊಂದಿಗೆ ಸಮಾಜ ಕಾರ್ಯ, ಸೋಷಿಯಾಲಜಿ, ಸೈಕಾಲಜಿ, ಚೈಲ್ಡ್ ಡೆವಲಪ್‌ಮೆಂಟ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಅಥವಾ ಪದವಿ ಪಡೆದವರು ಅರ್ಜಿ ಸಲ್ಲಿಬಹುದು. ಅರ್ಹ ಅಭ್ಯರ್ಥಿಗಳಿಗೆ ಪ್ರತಿ ಪ್ರಕರಣ ಒಂದಕ್ಕೆ ರೂ.3000 ಸಂಭಾವನೆ ನೀಡಲಾಗುವುದು. ಅರ್ಜಿ ಹಾಗೂ ಪ್ರಮಾಣ ಪತ್ರಗಳೊಂದಿಗೆ ಇದೇ ಅ.28ರೊಳಗೆ ನಗರದ ಬಾಲಭವನ ಆವರಣದಲ್ಲಿನ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಚೇರಿಗೆ ಸಲ್ಲಿಸುವಂತೆ ಸಿ.ಸವಿತಾ ತಿಳಿಸಿದ್ದಾರೆ.

# ಚಳ್ಳಕೆರೆ: ಒಂದೂವರೆ ವರ್ಷಗಳ ನಂತರ ನಡೆದ ನಗರಸಭೆಯ ಸಾಮಾನ್ಯ ಸಭೆ

» ಚಳ್ಳಕೆರೆ

ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ನಗರಸಭೆಯ ಸಾಮಾನ್ಯ ಸಭೆ ನಡೆದ ನಂತರ ಸುಮಾರು ಒಂದೂವರೆ ವರ್ಷಗಳ ನಂತರ ನಗರಸಭೆಯ ಸಾಮಾನ್ಯ ಸಭೆ ನಡೆಯುತ್ತಿದ್ದು, ಪ್ರಥಮ ಸಭೆಯಲ್ಲೇ ಸುಮಾರು 90 ವಿಷಯಗಳನ್ನು ಸಭೆಯಲ್ಲಿಟ್ಟಿದ್ದು, ಕೇವಲ ಕೆಲವೇ ವಿಷಯಗಳು ಮಾತ್ರ ಸಭೆಯಲ್ಲಿ ಚರ್ಚಿತವಾದವು.

ನಂತರ ಕಳೆದ ಸಭೆಯ ನಡಾವಳಿಯನ್ನು ಓದಿ 2023–24ರ ಜಮಾಖರ್ಚು, ಸಭಾನಡವಳಿಯನ್ನು ಸಭೆಯಲ್ಲಿ ಮಂಡಿಸಿ ಒಪ್ಪಿಗೆಪಡೆಯಲಾಯಿತು. ಇದೇ ಸಂದರ್ಭದಲ್ಲಿ ನಗರಸಭೆ ವ್ಯಾಪ್ತಿಯಲ್ಲಿ ಬರುವಮಳಿಗೆಬಾಡಿಗೆಹೆಚ್ಚಳಮತ್ತುಕರಾರು ಅವಧಿ ಮುಗಿದ ಮಳಿಗೆಗಳನ್ನು ನಗರಸಭೆ ಸ್ವಾಧಿನಕ್ಕೆ ಪಡೆದು ಸಾರ್ವಜನಿಕವಾಗಿ ಕಾನೂನು ಕ್ರಮಕ್ಕೈಗೊಳ್ಳುವಂತೆ ಪೌರಾಡಳಿತ ಇಲಾಖೆಯಿಂದ ಆದೇಶ ಬಂದಿರುವುದಾಗಿ ಸಭೆಯಲ್ಲಿ ತಿಳಿಸಲಾಯಿತು. ಇದೇ ಸಂದರ್ಭದಲ್ಲಿ ಕಚೇರಿ ವ್ಯವಸ್ಥಾಪಕ ಲಿಂಗರಾಜು ಮಾಹಿತಿ ನೀಡಿ, ನಗರಸಭೆವ್ಯಾಪ್ತಿಯಲ್ಲಿ ಇರುವ ಮಳಿಗೆಗಳ ಯಾವುದೇ





ತಕರಾರು ನ್ಯಾಯಾಲಯದಲ್ಲಿಲ್ಲವೆಂದು ಸಮಜಾಯಿಸಿ ಹೇಳಿದರು. ಇದಕ್ಕೆ ವಿರೋಧ ವ್ಯಕ್ತಪಡಿಸಿದ ಸದಸ್ಯ ಆರ್. ರುದ್ರನಾಯಕ, ಸುಳ್ಳು ಮಾಹಿತಿಯನ್ನು ಸಭೆಗೆ ನೀಡಲಾಗುತ್ತಿದೆ. ಇಂದಿಗೂ ಸಹ ರಾಜ್ಯ ಉಚ್ಚನ್ಯಾಯಾಲಯದಲ್ಲಿ ಮಳಿಗೆಗಳ ಬಗ್ಗೆ ತಕರಾರು ಅರ್ಜಿಯನ್ನು ಸಲ್ಲಿಸಲಾಗಿದೆ ಈ ಬಗ್ಗೆ ಸ್ಪಷ್ಟ ಮಾಹಿತಿ ಪಡೆದು ತಿಳಿಸಬೇಕೆಂದು ಒತ್ತಾಯಿಸಿದರು.

ನಗರದ ವ್ಯಾಪ್ತಿಯಲ್ಲಿ ಬೀದಿನಾಯಿಗಳ ಕಾಟ ಹೆಚ್ಚುತ್ತಿದೆ ಎಂದು ಸದಸ್ಯರಾದ ವಿ.ವೈ.ಪ್ರಮೋದ್, ಸಿ.ಬಿ.ಜಯಲಕ್ಷ್ಮಿ ಆಕ್ಷೇಪಣೆ ವ್ಯಕ್ತಪಡಿಸಿದರು. ಇದಕ್ಕೆ ಉತ್ತರಿಸಿದ ನೈರ್ಮಲ್ಯ ಇಂಜಿನಿಯರ್ ನರೇಂದ್ರಬಾಬು, ನಾಯಿಗಳ ಸಂತಾನಹರಣ ಚಿಕಿತ್ಸೆ ಮಾಡಿ ನಿಯಂತ್ರಿಸಬಹುದಾಗಿದೆ. ಈ ಬಗ್ಗೆಕ್ರಮಕೈಗೊಳ್ಳುವ ಭರವಸೆ ನೀಡಿದರು. ನಗರಸಭೆಯ ವ್ಯಾಪ್ತಿಯ ಮಳಿಗೆಗಳ ಹರಾಜಿನೊಂದಿಗೆ ನೂತನವಾಗಿ ನಿರ್ಮಿಸಿರುವ ಕೆಎಸ್‌ಆರ್‌ಟಿಸಿ ಬಸ್ಟಾಂಡ್ ಮುಂಭಾಗದನಿರ್ಮಿಸಿರುವ ಮಳಿಗೆಗಳನ್ನು ಹರಾಜು ಮಾಡಲಾಗುವುದು ಎಂದು ಸಭೆಗೆ ತಿಳಿಸಲಾಯಿತು. ಇದಕ್ಕೆ ಆಕ್ಷೇಪಣೆ ಎತ್ತಿದ ಸದಸ್ಯರು ಪ್ರಸ್ತುತ ನಗರಸಭೆಯ ಉದ್ದಿಮೆನಿಧಿಯಲ್ಲಿ 2.40 ಕೋಟಿ ಇದ್ದು ಕೇವಲ 13 ಮಳಿಗೆಗಳನ್ನು ಮಾತ್ರ ನಿರ್ಮಿಸಿರುವುದು ಸರಿಯಲ್ಲ, ಉಳಿದಜಾಗದಲ್ಲೂಮಳಿಗೆನಿರ್ಮಿಸುವಂತೆ ಹಿರಿಯ ಸದಸ್ಯ ಎಸ್.ಜಯಣ್ಣ, ಶಿವಕುಮಾರ್, ಸಿ.ಎಂ.ವಿಶುಕುಮಾರ್, ಸಿ.ಶ್ರೀನಿವಾಸ್, ಕವಿತಾನಾಯಕಿ, ನಿರ್ಮಲಾ, ಪಾಲಮ್ಮ, ನಾಗಮಣಿ, ತಿಪ್ಪಕ್ಕ ಒತ್ತಾಯಿಸಿದರು.

ನಗರಸಭೆ ಸ್ಥಾಯಿಸಮಿತಿ ಅಧ್ಯಕ್ಷರ ಆಯ್ಕೆ ಕುರಿತು ಸಭೆಯಲ್ಲಿ ಇಂದೆ ತೀರ್ಮಾನ ಕೈಗೊಳ್ಳುವಂತೆ ಸದಸ್ಯರು ಒತ್ತಾಯಿಸಿದಾಗ ಅಧ್ಯಕ್ಷೆಜೈತುಂಬಿ ಮುಂದಿನ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದಾಗ ಅಸಮದಾನ ವ್ಯಕ್ತಪಡಿಸಿದ ಜೆಡಿಎಸ್, ಬಿಜೆಪಿ ಸದಸ್ಯರು ಸಭೆಯಿಂದ ಹೊರನಡೆದರು. ಕೂಡಲೇ ಎಚ್ಚೆತ್ತ ಪೌರಾಯುಕ್ತರು, ಅಧಿಕಾರಿಗಳು ಸದಸ್ಯರ ಮನವಲಿಸಿ ಮತ್ತೆ ಸಭೆಗೆ ಕರೆತಂದರು. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಇಂಜಿನಿಯರಿಂಗ್ ಮತ್ತು ಎಂಬಿಬಿಎಸ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ಡೆಸ್ಕ್‌ಟಾಪ್ ಖರೀದಿಸಲು ಸಹಾಯದನಕ್ಕೆ ಅರ್ಜಿಸಲ್ಲಿಸುವ ಫಲಾನುಭವಿಗಳ ಅಂತಿಮಪಟ್ಟಿ ಸಿದ್ದಪಡಿಸಲಾಗಿದೆ ಎಂದು ಮಾಹಿತಿ ನೀಡಿದಾಗ ಆಕ್ಷೇಪ ವ್ಯಕ್ತಪಡಿಸಿದ ಸದಸ್ಯ ಎಂ.ಜೆ.ರಾಘವೇಂದ್ರ, ಯಾವ ಸದಸ್ಯರ ಗಮನಕ್ಕೆತಾರದಂತೆ ಅಧಿಕಾರಿಗಳು ಪಟ್ಟಿಸಿದ್ದಪಡಿಸಿರುವುದು ಸರಿಯಲ್ಲ ಎಂದರು.

**ರಾಜ್ಯ ಮಟ್ಟದ ಜೂಡೋ ಕ್ರೀಡಾ ಕೂಟ**

# ಹೆಣ್ಣುಮಕ್ಕಳ ಆತ್ಮರಕ್ಷಣೆಗೆ ಜೂಡೋ ಕಲಿಕೆ ಸಹಾಯಕಾರಿ: ನಗರಸಭೆ ಅಧ್ಯಕ್ಷೆ ಸುಮಿತಾ

» ಚಿತ್ರದುರ್ಗ

ಪ್ರಸ್ತುತ ಸಮಾಜದಲ್ಲಿ ಹೆಣ್ಣು ಮಕ್ಕಳ ಆತ್ಮ ರಕ್ಷಣೆಗೆ ಜೂಡೋ ಕಲಿಕೆ ಸಹಾಯಕಾರಿಯಾಗಿದೆ ಎಂದು ನಗರ ಸಭೆ ಅಧ್ಯಕ್ಷೆ ಸುಮಿತಾ ಬಿ.ಎನ್ ಅಭಿಮತ ವ್ಯಕ್ತಪಡಿಸಿದರು.

ಶಾಲಾ ಶಿಕ್ಷಣ ಇಲಾಖೆ ಪದವಿ ಪೂರ್ವ ವಿಭಾಘ ಹಾಗೂ ನಮ್ಮ ಎಕ್ಸ್‌ಪರ್ಟ್ ಪಿ. ಯು ಕಾಲೇಜು ವತಿಯಿಂದ ಬುಧವಾರ ನಗರದ ಒನಕೆ ಓಬವ್ವ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾದ ರಾಜ್ಯ ಮಟ್ಟದ ಜೂಡೋ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕ್ರೀಡೆಯು ಜೂಡೋ ಕಲೆ ಮೂಲತಃ ಆತ್ಮರಕ್ಷಣೆ ಕಲೆಯಗಿದೆ. ಇದರು ಜಪಾನ್ ದೇಶದಲ್ಲಿ ಮೊದಲು ಆರಂಭವಾಯಿತು. ವಿಶೇಷವಾಗಿ ಮಹಿಳೆಯರ ಸ್ವಯಂ ರಕ್ಷಣೆಗೆ ಜೂಡೋ ತುಂಬಾ ಅನುಕೂಲವಾಗಲಿದೆ. ಪ್ರತಿಯೊಂದು ಶಾಲಾ ಕಾಲೇಜಿನಲ್ಲಿ ಈ ಕ್ರೀಡೆಯನ್ನು ಕಲಿಸಿದಲ್ಲಿ ಮಕ್ಕಳಿಗೆ ಅತ್ಯಂತ ಸಹಾಯಕಾರಿಯಾಗಲಿದೆ ಎಂದರು.

ಕ್ರೀಡೆಯಲ್ಲಿ ಸೋಲು ಗೆಲುವು ಸಹಜ, ಇದನ್ನು ಸಮಾನವಾಗಿ ಸ್ವೀಕರಿಸಿ, ಕ್ರೀಡಾಪಟುಗಳು ಕ್ರೀಡಾ ಸ್ಪೂರ್ತಿ ಮೆರೆಯಬೇಕು. ಚಿತ್ರದುರ್ಗ ಜಿಲ್ಲೆಯಲ್ಲಿ ಆಯೋಜಿಸಿರುವುದು ಸಂತಸದ ಸಂಗತಿಯಾಗಿದೆ. ಕ್ರೀಡಾಪಟುಗಳು ಜಾಗರೂಕತೆಯಿಂದ ಕ್ರೀಡೆಯಲ್ಲಿ ಭಾಗವಹಿಸುವಂತೆ ಸುಮಿತಾ ಬಿ.ಎನ್. ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಆರ್.ಪುಟ್ಟಸ್ವಾಮಿ, ಜೂಡೋ ಹಿರಿಯ ತರಬೇತುದಾರೆ ಡಾ.ಎಂ. ಎನ್.ತ್ರಿವೇಣಿ, ಪ್ರಾಂಶುಪಾಲರ ಸಂಘದ ಅಧ್ಯಕ್ಷ ಎಸ್.ದೇವೇಂದ್ರಪ್ಪ, ಕಾರ್ಯದರ್ಶಿ ಆರ್. ಮುಸ್ತಾಫ್, ಖಜಾಂಚಿ ಜೆ.ರಂಗಸ್ವಾಮಿ, ಜಿಲ್ಲಾ





ಉಪನ್ಯಾಸಕರ ಸಂಘದ ಜಿಲ್ಲಾಧ್ಯಕ್ಷ ಬಿ.ಆರ್. ಮಲ್ಲೇಶ್, ಐಡಿಯಲ್ ಎಜುಕೇಷನ್ ಸೊಸೈಟಿ ಹಾಗೂ ನಮ್ಮ ಎಕ್ಸ್‌ಪರ್ಟ್ಸ್ ಪಿ.ಯು ಕಾಲೇಜು ಪ್ರಾಂಶುಪಾಲ ಪಿ.ಅರುಣ್ ಕುಮಾರ್ ಸೇರಿದಂತೆ ವಿವಿಧ ಕಾಲೇಜುಗಳ ಪ್ರಾಂಶುಪಾಲರು ಉಪಸ್ಥಿತರಿದ್ದರು. ಜೂಡೋ ಕ್ರೀಡಾಕೂಟದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ 139 ಪುರುಷ, 101 ಮಹಿಳಾ ಕ್ರೀಡಾಪಟುಗಳು ಭಾಗವಹಿಸಿದ್ದರು. ಪುರುಷರ ವಿಭಾಗದಲ್ಲಿ 10 ಮತ್ತು ಮಹಿಳೆಯರ ವಿಭಾಗದಲ್ಲಿ 9 ವಿಧಗಳಲ್ಲಿ ಕ್ರೀಡೆಯನ್ನು ಆಯೋಜನೆ ಮಾಡಲಾಗಿತ್ತು. ಈ ಬಾರಿಯ ರಾಜ್ಯ ಮಟ್ಟದ ಕ್ರೀಡಾ ಕೂಟದಲ್ಲಿ ಚಿನ್ನದ ಪದಕ ಪಡೆದ 19 ಕ್ರೀಡಾಪಟುಗಳನ್ನು ಮುಂದಿನ ಡಿಸೆಂಬರ್ ಕೊನೆಯ ವಾರದಲ್ಲಿ ಪಂಜಾಬ್ ರಾಜ್ಯದಲ್ಲಿ ನಡೆಯಲಿರುವ ರಾಷ್ಟ್ರೀಯ ಜೂಡೋ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ.

ಮಹಿಳೆಯರ ಮೊದಲ ನಾಲ್ಕು ಸುತ್ತಿನಲ್ಲಿ ವಿವಿಧ ವಿಭಾಗಗಳಲ್ಲಿ ವಿಜೇತರಾದ ಬಾಗಲಕೋಟೆ ಜಿಲ್ಲೆಯ ಸ್ವಾತಿ, ಚಿಕ್ಕೋಡಿಯ ಅನುರಾಧ ಹಾಗೂ ಬೆಂಗಳೂರು ದಕ್ಷಿಣ ವಿಭಾಗದ ವರಲಕ್ಷ್ಮಿ ಚಿನ್ನದ ಪದಕ ಪಡೆದು ಮಿಂಚಿದರು.

ಬಾಲಕರ ವಿಭಾಗದಲ್ಲಿ ಬೆಳಗಾವಿ ಜಿಲ್ಲೆಯ ಮನೋಜ್ ಸತ್ಯಪ್ಪ, ದಾವಣಗೆರೆಯ ವಿಕಾಸ್ ನಾಯ್ಕ್, ಕಲಬುರುಗಿ ಜಿಲ್ಲೆಯ ಕೆ.ಆಶಿಶ್ ಜೂಡೋ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ ಪಡೆಯುವ ಮೂಲಕ ಚಿನ್ನದ ಪದಕ ಪಡೆದರು.

## ಜಿಟಿಜಿಟಿ ಮಳೆ ಜನಜೀವನ ಅಸ್ತವ್ಯಸ್ಥ: ಅತಿವೃಷ್ಟಿಯಿಂದ ಬೆಳೆಗೆ ಹಾನಿ



» ಚಳ್ಳಕೆರೆ

ತಾಲ್ಲೂಕಿನಾದ್ಯಂತ ಬುಧವಾರ ಸುರಿದ ಜಿಟಿಜಿಟಿ ಮಳೆಯಿಂದ ಜನ ಜೀವನ ಅಸ್ಥವ್ಯಸ್ಥವಾಯಿತು. ಬೆಳ್ಳಂಬೆಳ್ಳಗೆ ವರುಣರಾಯನ ಆಗಮನದಿಂದ ಸಣ್ಣಪುಟ್ಟ ವ್ಯಾಪರಸ್ಥರು, ಹಾಲು, ಪೇಪರ್ ಹಂಚಿಕೆ ಮಾಡುವ ಪರದಾಡಿದರು.ಮುಂಜಾನೆ 5ರಿಂದಲ್ಲೇ ಜಿಟಿಜಿಟಿ ಮಳೆ ಪ್ರಾರಂಭವಾದ್ದರಿಂದ ಗ್ರಾಮೀಣ ಭಾಗದಿಂದ ಶಾಲಾ, ಕಾಲೇಜಿಗೆ ಬರುವ ವಿದ್ಯಾರ್ಥಿಗಳು ತೊಯ್ದುಕೊಂಡೆ ಕಾಲೇಜಿಗೆ ಆಗಮಿಸಿದರು. ಇನ್ನು ಕಚೇರಿ, ಖಾಸಗಿ ಉದ್ಯೋಗಕ್ಕೆ ಹೋಗುವ ಜನರು ಆಟೋ, ಬೈಕ್ ಗಳಮೂಲಕ ಕಚೇರಿ ತಲುಪಿದರು. ಇಡೀ ದಿನದ ಮಳೆಯಿಂದ ಬೀದಿಬದಿ ವ್ಯಾಪಾರಸ್ಥರು ಅಂಗಡಿಗಳನ್ನು ತೆರೆಯಲಿಲ್ಲ, ಅಲ್ಲೊಂದು, ಇಲ್ಲೊಂದು ತೆರೆದಿದ್ದರೂ ವ್ಯಾಪರವಾಗದೆ ಸುಮ್ಮನೆ ಕುಳಿತು ಮನೆಕಡೆ ನಡೆದರು. ಅಗತ್ಯ ಕೆಲಸಕ್ಕೆ ಹೋಗುವವರು ಕೊಡೆಹಿಡಿದು ಕಾರ್ಯಗಳತ್ತ ನಡೆದರು. ಜಿಟಿಜಿಟಿ ಮಳೆಯಿಂದ ಸಣ್ಣಪುಟ್ಟ ಮಣ್ಣಿನ ಮನೆಯವರು ಯಾವಾಗ ಕುಸಿತವೋ ಎನ್ನುವ ಭಯದಲ್ಲೇ ದಿನದೂಡಿದರು. ನಿರಂತರ ಮಳೆ ಬಯಲುಸೀಮೆಯಲ್ಲಿ ಮಲೆನಾಡಿನ ಅನುಭವ ನೀಡಿತು. ಮಳೆಯ ಪ್ರಭಾವದಿಂದ ಕೆಲವರು ಮನೆಯಿಂದ ಹೊರಬರಲ್ಲೇ ಇಲ್ಲ, ಒಮ್ಮೆ ಜೋರು, ಮತ್ತೊಮ್ಮೆಜಿಟಿಜಿಟಿ ಮಳೆ ಜನರ ನೆಮ್ಮದಿ ಕಸಿದುಕೊಂಡಿತ್ತು.

**ಜಿಟಿಜಿಟಿ ಮಳೆ ಬೆಳೆಗೆ ಕುತ್ತು** ಸಕಾಲಕ್ಕೆ ಮಳೆ ಇಲ್ಲದೆ ಕೃಷಿಚಟುವಟಿಕೆಯಲ್ಲಿ ಹಿನ್ನಡೆ ಅನುಭವಿಸ ಬಯಲು ಸೀಮೆ. ಆದರೂ ಮೊಂಡು ಧೈರ್ಯದಿಂದ ಬಿತ್ತನೆ ಮಾಡಿದ್ದ ರೈತನಿಗೆ ಅತಿವೃಷ್ಠಿ ಕಂಗಾಲು ಮಾಡಿದೆ. ಶೇಂಗಾ ಬೆಳೆಯನ್ನು ಹರಗಿ(ಕಿತ್ತು) ಹೊಲದಲ್ಲೇ ಕಂಪಾಗುತ್ತಿವೆ. ದನಕರುಗಳಿಗೆ ಇಷ್ಟುವಷ್ಟೋ ಮೇವಾದರೂ ಆಗೂವ ನಿರೀಕ್ಷೆಯಲ್ಲಿ ರೈತನಿಗೆ ನಿರಂತರ ಮಳೆಯಿಂದ ಅದು ಕೈಚೆಲ್ಲೂವ ಸಂಭವಹೆಚ್ಚುತ್ತಿದೆ. ಕೆಲ ಜಮೀನುಗಳಲ್ಲಿ ಶೇಂಗಾ, ಮೆಕ್ಕೆಜೋಳ, ರಾಗಿ, ತೊಗರಿ, ಸಜ್ಜೆ ಮುಂತಾದ ಬೆಳೆಗಳು ಜಮೀನಿನಲ್ಲೆ ಮೊಳಕೆ ಬರುತ್ತಿವೆ. ಅತಿವೃಷ್ಟಿಯಿಂದ ಕೈಗೆ ಬಂದ ತುತ್ತು ಬಾಯಿಗೆ ಬಾರದಾಗಿದೆ.

**ಪ್ರಮುಖ ಸುದ್ದಿ**

# ವಚನಾಧಾರಿತ ನಿಜಾಚರಣೆ ಕಮ್ಮಟದ ಸಮಾರೋಪ

» ಹೊಸದುರ್ಗ

ನಮ್ಮ ನಡೆ ನುಡಿ ಹೇಗಿರಬೇಕೆಂಬ ಎಚ್ಚರ ಪ್ರತಿಯೊಬ್ಬ ವ್ಯಕ್ತಿಗೆ ಇರಬೇಕು. ಮಾತು ಮತ್ತು ಕ್ರಿಯೆ ಒಂದಾದಾಗ ವ್ಯಕ್ತಿಯ ವ್ಯಕ್ತಿತ್ವ ಅರಳುವುದು. ಮಾತು ಒಂದು ಕೃತಿ ಮತ್ತೊಂದು ಆದರೆ ಅವನ ಬದುಕು ಕಮರಿಹೋಗುವುದು. ಲಿಂಗಾವಂತ ಧರ್ಮ ನಮ್ಮನ್ನು ಸದಾ ಎಚ್ಚರವಾಗಿರುವಂತೆ ಮಾಡುತ್ತದೆ. ಜಾಗೃತಗೊಳಿಸುತ್ತದೆ. ಲಿಂಗಾವಂತರನ್ನು ಬಹಳಷ್ಟು ಜನ ಟೀಕೆ ಮಾಡಬಹುದು. ಅದಕ್ಕೆ ಅಂಜಬೇಕಾಗಿಲ್ಲ. ಬಸವನ ಶಕ್ತಿ ನಮ್ಮ ಬೆನ್ನ ಹಿಂದೆ ಇದ್ದರೆ ಯಾರಿಗೂ ಅಂಜದೇ ಸುಖಸಂತೋಷದಿಂದ ಬಾಳಬಹುದು ಎಂದು ಸಾಣೆ ಹಳ್ಳಿಯ ರಂಗ ಜಂಗಮ ಪಂಡಿತರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ತಾಲೂಕಿನ ರಂಗಕಾಶಿ ಸಾಣೇಹಳ್ಳಿ ಗುರುಬಸವ ಮಹಾಮನೆಯಲ್ಲಿ ಎರಡು ದಿನಗಳ ಕಾಲ ನಡೆದ 'ವಚನಾಧಾರಿತ ನಿಜಾಚರಣೆ ಕಮ್ಮಟ'ದ ಸಮಾರೋಪ ಸಮಾರಂಭದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು ಲಿಂಗಾಯತ ಧರ್ಮದ ಬಗ್ಗೆ ಹೇಳುತ್ತಾ ಹೋದರೆ



ಸನಾತನ ಪರಂಪರೆಯವರು ನಮ್ಮ ಬಸವ ಪರಂಪರೆಯವರನ್ನು ಬಹಳಷ್ಟು ಟೀಕಿಸುವರು. ಆಗ 'ಬೈದವರೆನ್ನ ಬಂಧುಗಳು, ನಿಂದಿಸಿದವರೆನ್ನ ತಂದೆ ತಾಯಿಗಳು' ಎನ್ನುವ ಭಾವ ಬರಬೇಕು. ಶ್ರೇಷ್ಠಕಾರದ ವ್ಯಸನ ನಮ್ಮಿಂದ ದೂರವಾಗಿ ಭೃತ್ಯಾಚಾರದ ಭಾವ ಅಳವಡಬೇಕು. ಎಲ್ಲ ಕೆಲಸವನ್ನು ನಾನು ಮಾಡಿದೆ ಎನ್ನುವ ಅಹಂಕಾರ ಯಾರಿಗೂ ಸಲ್ಲದು. ಎಲ್ಲರೊಳಗೆ ನಾನೊಬ್ಬ ಎನ್ನುವ ವಿನಯವಂತಿಕೆಯ ಭಾವ ಇರಬೇಕು. ಅರಿವಿಂಗೆ ಹಿರಿದು ಕಿರಿದು ಭಾವ ಯಾರಲ್ಲೂ ಬರದೇ ಇನ್ನೂ ಕಲಿಯಬೇಕು ಎನ್ನುವ ವಿದ್ಯಾರ್ಥಿ ಭಾವ ಬರಬೇಕು. ಪ್ರತಿಯೊಬ್ಬರಿಗೂ ನಂಬಿಕೆ ಬಹಳ ಮುಖ್ಯ. ನಂಬಿಕೆಯನ್ನಿಟ್ಟುಕೊಂಡರೆ ಏನನ್ನಾದರೂ ಸಾಧನೆ ಮಾಡಲಿಕ್ಕೆ ಸಾಧ್ಯ.

ಇಂತಹ ಗೋಷ್ಠಿಗಳಿಂದ ನಾವು ಹೊಸ ಹೊಸ ವಿಚಾರಗಳನ್ನು ಕಲಿತುಕೊಳ್ಳುತ್ತಾ ಹೋಗುತ್ತೇವೆ. ಎರಡು ದಿನಗಳ ಕಾಲ ನಡೆದ ಕಮ್ಮಟ ತುಂಬಾ ಪರಿಣಾಮಕಾರಿಯಾಗಿ ನಡೆಯಿತು. ಮುಂದಿನ ಕಾರ್ಯ ಸಾಧನೆಯನ್ನು ಕಮ್ಮಟಕ್ಕೆ ಭಾಗವಹಿಸಿದ ಶಿಬಿರಾರ್ಥಿಗಳು ಮುಂದುವರಿಸಿಕೊಂಡು ಹೋಗಬೇಕು. ಮುಂದಿನ ದಿನಮಾನಗಳಲ್ಲಿ ಯುವಕರಿಗೆ ಇಂತಹ ಶಿಬಿರವನ್ನು ನೆರವೇರಿಸುತ್ತೇವೆ ಎಂದರು. ಗೃಹಪ್ರವೇಶ, ಕಲ್ಯಾಣ ಮಹೋತ್ಸವ, ಲಿಂಗಾಧಾರಣೆ, ಶವಸಂಸ್ಕಾರದ ವಚನಾಧಾರಿತ ನಿಜಾಚರಣೆಯ ವಿಷಯ ಮಂಡನೆ ಹಾಗೂ ಪ್ರಾತ್ಯಕ್ಷಿಕೆಯನ್ನು ತುಂಬಾ ಪರಿಣಾಮಕಾರಿಯಾಗಿ ಪಿ ರುದ್ರಪ್ಪ, ಎಸ್ ಎನ್ ಅರಬಾವಿ, ಎಂ ಎಂ ಸಂಗೊಳ್ಳಿ, ಎಂ ಎಂ ಮಡಿವಾಳರ ನೆರವೇರಿಸಿದರು. ಶಿವಮೂರ್ತಯ್ಯ ಸ್ವಾಗತಿಸಿದರೆ ವಿಶ್ವೇಶ್ವರಯ್ಯ ನಿರೂಪಿಸಿ ವಂದಿಸಿದರು. ನಾಗರಾಜ್ ಹೆಚ್ ಎಸ್ ಹಾಗೂ ಶರಣ ನಿಜಾಚರಣೆಗೆ ಸಂಬಂಧಪಟ್ಟ ವಚನಗಳನ್ನು ಹಾಡಿದರು. ಕಮ್ಮಟಕ್ಕೆ ಕರ್ನಾಟಕದ ಬೇರೆ ಬೇರೆ ಭಾಗಗಳಿಂದ 200 ಜನ ಶಿಬಿರಾರ್ಥಿಗಳು ಭಾಗವಹಿಸಿದ್ದರು.



## ಆದಿಕಾವ್ಯ ವಾಲ್ಮೀಕಿ ರಾಮಾಯಣ

# ಆದಿಕವಿ ವಾಲ್ಮೀಕಿ ಮಹರ್ಷಿಗಳು




**ಮಹರ್ಷಿ ವಾಲ್ಮೀಕಿ ಅವರ ಜಯಂತಿ ಪ್ರಯುಕ್ತ ಅವರ ಜೀವನ ಪಥದ ಸೂಕ್ಷ್ಮ ಚಿತ್ರಣವನ್ನು ಅಥಣಿಯ ಶ್ರೀಪ್ರಭುಚನ್ನಬಸವ ಸ್ವಾಮೀಜಿ ಅವರ ಸಂಪಾದಿತ ಕೃತಿ "ಮಹಾತ್ಮರ ಚರಿತಾಮೃತ" ಕೃತಿಯಿಂದ ಸಂಗ್ರಹಿಸಿ ಕೊಟ್ಟಿದ್ದಾರೆ**



ರುದ್ರಮೂರ್ತಿ ಎಂ.ಜೆ

**ಕೂಜಂತಂ ರಾಮಾ ರಾಮೇತಿ**
**ಮಧುರಂ ಮಧುರಿಕ್ಷರಂಮ್**
**ಅರುಹ್ಯ ಕವಿತಾ ಶಾಖಮ್**
**ಒಂದೇ ವಾಲ್ಮೀಕಿ ಕೋಕಿಲಮ್**

ರಾಮಾಯಣ ಆದಿಕಾವ್ಯ



ಅದರ ಕವಿ ಆದಿಕವಿ ! ಆತ ಮಹರ್ಷಿ ಆಗಿರುವುದರಿಂದ ದ್ರಷ್ಟಾರನೂ ಅಹುದು. ಆತನ ಪೂರ್ಣದೃಷ್ಟಿ ಲೋಕಾತಿಕ್ರಾಂತ ಗೋಚರವೂ ಆಗಿರುವುದರಿಂದ ಕ್ರಾಂತದರ್ಶಿ ಮತ್ತು ಅವನ ಪ್ರತಿಭೆ ನಿತ್ಯ ಸತ್ಯ ಸಂಸ್ಪರ್ಶಿ! ಆ ಋಷಿಕವಿ ವಾಲ್ಮೀಕಿಯ ಸಮುದ್ರೋಪಮಯವಾದ ಅದೊಂದು ಬೃಹತ್ ಭಾವಗೀತೆಯಂತಿದೆ. ಅದು ಏಕಕವಿ ಕೃತಿಯೂ ಆಗಿದೆ. ಬಹುಕಾಲದ ಸಂಸ್ಕೃತಿಯ ಬಹುದೊಡ್ಡ ಜನಾಂಗದ ಮನಃ ಕೃತಿಯೂ ಆಗಿದೆ. ಮೊದಲನೆಯ ಕಾರಣಕ್ಕಾಗಿ ಅದು ಭಾವಗೀತೆಯಂತಿದ್ದರೆ; ಎರಡನೆಯ ಕಾರಣಕ್ಕಾಗಿ ಪುರಾಣದಂತಿದೆ. ಆದ್ದರಿಂದಲೇ ಅದಕ್ಕೆ ಮಹಾಕಾವ್ಯ ಎಂಬ ಬಿರುದು ಸರ್ವಸುಂದರವಾಗಿ ಒಪ್ಪುತ್ತದೆ.

**▪ ರಾಷ್ಟ್ರಕವಿ ಕುವೆಂಪು**

–ಹೀಗೆ ನಾಡಿನ ಲಕ್ಷಾಂತರ ಕವಿ– ಕೋವಿದರಿಗೆ, ಪಂಡಿತ ಪಾಮರರಿಗೆ, ಗಾಯಕ ವೈಣಿಕರಿಗೆ, ಸಾಧು ಸಜ್ಜನರಿಗೆ ಸ್ಫೂರ್ತಿಯ ಸುಪ್ರಸನ್ನ ಚೇತನರಾದವರು ಶ್ರೀ ಮಹರ್ಷಿ ವಾಲ್ಮೀಕಿಯವರು. "ಮಹರ್ಷಿ" ಎಂದರೆ ಭಾರತೀಯಆಧ್ಯಾತ್ಮವನ್ನುಅನುಭಾವಿಕವಾಗಿಸಾಧಿಸಿದ ಯೋಗಿಗೆ ಮಹರ್ಷಿ ಎಂದು ಕರೆಯುತ್ತಾರೆ. ಇಂತಹ ಘನತರ ಪದವಿಯನ್ನು ತಮ್ಮ ಅವಿರತ ಸಾಧನೆಯ ಮೂಲಕ ಸಾಧಿಸಿ ಸಿದ್ಧಿಯ ಶೃಂಗವನ್ನೇರಿದ ಆದಿಕವಿ ಅನಂತ ವರಕವಿ ಶ್ರೀ ವಾಲ್ಮೀಕಿಯವರು.

ವ್ಯಕ್ತಿಯಾಗಿ ಜನಿಸಿ ಅನೇಕರು ಒಂದು ಪೂರ್ಣ ವ್ಯಕ್ತಿಯಾಗಿ ಅಥವಾ ಪೂರ್ಣ ಮಾನವನಾಗಿ ಬದುಕನ್ನು ಪೂರ್ಣಗೊಳಿಸಲಾರರು. ಮಹಾಜ್ಞಾನಿ ಚೆನ್ನಬಸವಣ್ಣ ಹೇಳುವಂತೆ ಹುಟ್ಟಿದವರೆಲ್ಲ ನೆಟ್ಟನೆ ಶಿವ ಜ್ಞಾನಿಗಳಾದರೆ ,ಭವಕ್ಕೆ ಬೀಜ ಇನ್ನೆಲ್ಲಿಯದೋ ? ಎಂದು ಉದ್ಗಾರ ತೆಗೆಯುತ್ತಾರೆ. ಇಂತಹ ಭವದ ಬಂಧನದ ಭೇಗೆಯಲ್ಲಿ ಒಂದು ಪವಾಡವೇ ಇಲ್ಲಿ ನಡೆಯುತ್ತದೆ .ವ್ಯಕ್ತಿಯಾಗಿ ಹುಟ್ಟಿ, ಸ್ವಾರ್ಥಿಯಾಗಿ ಸುಲಿಗೆ ಮಾಡಿ, ಈ ದಾರಿ ನಿನಗೆ ಸಲ್ಲದು.! ಆ ಒಂದೇ ಒಂದು ಗುರುವಿನ ಅಜ್ಞೆ ಆತನ ಬದುಕನ್ನೇ ಬದಲಿಸಿತು. ಆತನೇ ಮುಂದೆ ಮಹಾ ಕವಿಯಾದ. ಅವರೇ ಮಹರ್ಷಿ ವಾಲ್ಮೀಕಿಯವರು.

**ನಾಯಕರ ನಾಯಕ:** ಕ್ರಿಸ್ತಪೂರ್ವ ಆರೇಳನೇಯ ಶತಮಾನದಲ್ಲಿ ಉದಿಸಿ ಬಂದವನೇ ರತ್ನಾಕರ .ನಿಷಾಧರ, ಬೇಡ ನಾಯಕ, ವ್ಯಾದರ ಎನ್ನುವ ಕುಲದಲ್ಲಿ ಹುಟ್ಟಿದ ತಮಾಸಾತೀರದ ಸುಮನಸ್ಕ ಚೇತನ. ಕೆಲವರು "ಪ್ರಚೇತಸ" ಎಂಬ ಋಷಿಯ ಮಗ ಎಂದು ಹೇಳಿದರೆ, ಇನ್ನು ಕೆಲವು ಸರಿಯಾದ ವೃತ್ತಾಂತವನ್ನು ಪ್ರಸಾರ ಮಾಡಿಲ್ಲ. ಒಂದು ಅಪರೂಪದ ಘಟನೆ ಅವನ ಬದುಕನ್ನೇ ಬದಲು ಮಾಡಿತು.



**ಮಹರ್ಷಿ ಅಗಸ್ತ್ಯರ ಅನುಗ್ರಹ:–** ವಿಂಧ್ಯ ಪರ್ವತ ಮತ್ತು ಪೂದಿಯಲ್ ಪರ್ವತಗಳ ನಡುವೆ ವರವಾಗಿ ಅಗಸ್ತ್ಯ ಮಹರ್ಷಿಗಳು ಲೋಕಸಂಚಾರವಾಗಿ ಪಾದ ಬೆಳೆಸಿದ್ದರು. ಆಗ ಓರ್ವ ಕ್ರೂರಿ ಬೇಟೆಗಾರ ಜನರನ್ನು ಹಿಂಸಿಸಿ ದೋಚುತಿದ್ದ. ಪ್ರಾಣಿ ವಧೆ ಮಾಡುತ್ತಿದ್ದ. ಇದನ್ನರಿತ ಅಗಸ್ತ್ಯರು ಯಾಕಪ್ಪ ಹೀಗೆ ಮಾಡುತ್ತಿರುವೆ ಎಂದರು. ನನಗಾಗಿ ನನ್ನ ಹೆಂಡತಿ ಮಕ್ಕಳಿಗಾಗಿ ಅಂದ. ನಿನ್ನ ಸುಖದಲ್ಲಿ ಪಾಲುದಾರರಾಗಿದ್ದರೆ, ಹಾಗಾದರೆ ನಿನ್ನ ದುಃಖದಲ್ಲಿ ಅವರೆಲ್ಲ ಪಾಲುದಾರರಾಗುವವರೇ

ಕೇಳಿ ಬಾ ಎಂದರು. ಹೋಗಿ ಕೇಳಿ ಬಂದ. ಕುಟುಂಬ ಪರಿವಾರದವರು ಹೇಳಿದರು, ಸುಖದಲ್ಲಿ ಮಾತ್ರ ನಾವು ಪಾಲದಾರರು, ದುಃಖದಲ್ಲಿ ನಾವು ಪಾಲು ಆಗಲಾರೆವು. ಆಗ ಗುರುಗಳು ಅವನಿಗೆ ಆಶೀರ್ವಾದ ಮಾಡಿದರು .ಇಷ್ಟು ದಿನ ಬೇಟೆ, ಬಡಿದಾಟ, ಕ್ರೂರತನ ಮಾಡಿದ್ದು ಸಾಕು. ಇನ್ನು ಮುಂದೆ ನೀನು ಆದರ್ಶ ಪುರುಷನಾಗಬೇಕು. ಹಾಗೆ ಆಗಲಿ ಎಂದ. ಏನಿಲ್ಲ ;ಒಂದು ಕ್ಷಣ ತಪ್ಪದೇ ಮರಾ– ಮರಾ–ಮರ ಎಂದು ಹೇಳಲು ಆರಂಭಿಸು ಎಂದರು. ಅಷ್ಟೇ ಶ್ರದ್ಧೆಯಿಂದ ಹೇಳುತ್ತಾ ಹೋದ. ಒಂದು ಬೃಹತ್ತಾದ ಮರದ ಕೆಳಗೆ ಕುಳಿತ. ಮರ ಮರ ಶಬ್ದವೇ ಮುಂದೆ ರಾಮ– ರಾಮ –ರಾಮ ಆಯಿತು. ತಪಸ್ಸಿಗೆ ಕುಳಿತ ಸ್ಥಳ ವಲ್ಮೀಕ(ಹುತ್ತ)ಬೃಹತ್ತಾಗಿ ಬೆಳದು ನಿಂತಿತ್ತು. ಕೆಲವು ವರ್ಷಗಳ ನಂತರ ಅಗಸ್ತ್ಯರು ಶಿಷ್ಯನನ್ನು ಅರಸುತ್ತ ಬಂದು ನೋಡಿದರು. "ರಾಮ ಜಪ "ಭುವನ ತುಂಬಿತು. ಅಂದು ವಲ್ಮೀಕದಿಂದ ಹೊರಬಂದ ಮಹಾತಪಸ್ವಿಯೇ ಮುಂದೆ "ವಾಲ್ಮೀಕಿ" "ಮಹರ್ಷಿ"ಯಾದರು. ಆ "ರಾಮ" ಶಬ್ದವೇ ವಾಲ್ಮೀಕಿ ರಾಮಾಯಣಕ್ಕೆ ನಾಂದಿಯಾಯಿತು.

**ವಾಲ್ಮೀಕಿ ರಾಮಾಯಣ:**ನಮ್ಮ ದೇಶದ ಆದಿ ಕಾವ್ಯ ವಾಲ್ಮೀಕಿ ರಾಮಾಯಣ. ಆದಿಕವಿ ವಾಲ್ಮೀಕಿ ಮಹರ್ಷಿ. ವಿಶ್ವದ ಸರ್ವೋತ್ಕೃಷ್ಟ ಗ್ರಂಥಗಳಲ್ಲಿ ಒಂದು ವಾಲ್ಮೀಕಿ ರಾಮಾಯಣ .ಸಂಸ್ಕೃತ ಭಾಷೆಯೊಳಗೆ ಭಾರತದ ಮಹಾನತೆ ಗಹನತೆ ಸಾರುವ ಸಾರಸ್ವತ ಸತ್ಕೃತಿ. ಶ್ರೀ ರಾಮನ ವ್ಯಕ್ತಿತ್ವವನ್ನು ಕಾವ್ಯದ ಮೂಲಕ ಇಮ್ಮಡಿಗೊಳಿಸಿದ ಶ್ರೇಷ್ಠ ಪ್ರತಿಭಾ ಸಂಪತ್ತು ವಾಲ್ಮೀಕಿಯವರದು. ಕ್ರಿಸ್ತಪೂರ್ವ ಆರೇಳನೆಯ ಶತಮಾನದಿಂದ ಕ್ರಿಸ್ತಾಬ್ದ ಐದನೇ ಶತಮಾನದವರೆಗೂ ಮಾರ್ಪಾಡುಗೊಳ್ಳುತ್ತಾ ಏಳು ಕಾಂಡಗಳಲ್ಲಿ 24,000 ಶ್ಲೋಕ ರೂಪದಲ್ಲಿ ರೂಪುಗೊಂಡಿದೆ ಎಂದು ಹಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. "ಪಾಠೇ ಗೇಯೇ ಚ ಮಧುರಂ ತಂತ್ರಿಲಯ ಸಮನ್ವಿತಂ" ರಾಮಾಯಣದ ಹಿರಿಮೆಗೆ ಇದು ರನ್ನಗನ್ನಡಿ.

ವಾಲ್ಮೀಕಿ ರಾಮಾಯಣವನ್ನು ರಚಿಸುತ್ತಿರುವಾಗಲೇ" ರಾಮಕಥಾ ಚರಿತೆ" ಬೇಡನನ್ನು ಮಹರ್ಷಿಯನ್ನಾಗಿ ಸೃಜಿಸಿತು. ಯಾರ ಬಂದೂಕಿನಿಂದ ಹತ್ಯೆಯಾದಾಗ ಮಹಾತ್ಮನ ಬಾಯಿಂದ ಬಂದ ಮಂತ್ರ "ಹೇ ರಾಮ್" ಅದು ಅವರ ಸಾವಿನಲ್ಲಿಯೂ ಸಾರ್ಥಕದ ಸಂಜೀವಿನಿ ನೀಡಿತು. ಅಂತಹ ರಾಮ ಮಂತ್ರ ವ್ಯಾಧನನ್ನು ವಿಶೇಷ ವ್ಯಕ್ತಿಯಾಗಿ ರೂಪಿಸಿದರೆ ಆಶ್ಚರ್ಯ ಪಡುವಂತದ್ದೇನೂ ಇಲ್ಲ .ಅದಕ್ಕೆ ಇರುವ ದಿವ್ಯಶಕ್ತಿ ಅದಾಗಿದೆ. ತಮಸಾ ತೀರದ ಮುಂದೆ ತತ್ವಪ್ರೇರಣೆ.

ಒಮ್ಮೆ ವಾಲ್ಮೀಕಿ ತಮಸಾ ನದಿಯ ದಡದ ಮುಂದೆ ಕುಳಿತಾಗ ನೂರಾರು ಕ್ರೌಂಚ ಪಕ್ಷಿಗಳು ಹಾರಿಕೊಂಡು ಬಂದಿದ್ದವು. ಅದನ್ನು ಕಂಡ ಓರ್ವ ಬೇಡ ಬಾಣದಿಂದ ಮೋಹಕ ಪಕ್ಷಿಗಳನ್ನು ಕೊಂದು ಹಾಕಿದ. ಅದರಿಂದ ಅಸಂತೋಷಗೊಂಡ ವಾಲ್ಮೀಕಿ ನೋವಿನಿಂದ–ಮಾ ನಿಷಾದ ಪ್ರತಿಷ್ಠಾ ತ್ವಮಮಗಃ ಶಾಶ್ವತೀಃ ಸಮಃ ಯತ್ ಕ್ರೌಂಚಮಿಥುನಾದೇಕ ಮವಧೀಃ ಕಾಮಮೋಹಿತಮ್

ಹೇ ನಿಷಾಲ ನಿನಗೆ ಎಂದೆಂದೂ ಏಳ್ಗೆ ಆಗದಿರಲಿ ಎಂದ. ನೀನು ವ್ಯಥೆ ಪಡದಿರು ಗುರು ಸ್ಮರಣೆಯೊಂದಿಗೆ ದಿವ್ಯ ಚರಿತೆ ರೂಪಿಸು ಎಂದು ಗುರುಪ್ರೇರಣೆಯ ಮೇರೆಗೆ ಕಾವ್ಯ ಸಾಕಾರಗೊಂಡಿತು. "ವಾಲ್ಮೀಕಿ ರಾಮಾಯಣ" ಬರೀ ಚರಿತೆಯಲ್ಲ, ಕಾವ್ಯ ದರ್ಶನ ಶಾಸ್ತ್ರ. ಕಾವ್ಯ ಎಂದು ವಿದ್ವನ್ಮಣಿಗಳು ಗೌರವಿಸಿದ್ದಾರೆ. ಎರಡೂವರೆ ಸಾವಿರ ವರ್ಷಗಳಿಂದ ಶ್ರೀಮದ್ವಾಲ್ಮೀಕಿ ರಾಮಾಯಣ "ಜೀವನದಿ"ಯಾಗಿ ಎಲ್ಲರ ಬದುಕನ್ನು ಹಸನುಗೊಳಿಸಿದೆ.

**ಪೂರ್ವೋರಾಮ ತಪೋವನಾದಿ ಗಮನಂ**
**ಹತ್ವಾ ಮೃಗಂ ಕಾಂಚನಮ್**
**ವೈದೇಹಿ ಹರಣಮ್**
**ಜಟಾಯು ಮರಣಮ್**
**ಸುಗ್ರೀವ ಸಂಭಾಷಣಮ್**
**ವಾಲಿ ನಿಗ್ರಹಣಮ್**
**ಸಮುದ್ರ ತರಣಮ್**
**ಲಂಕಾಪುರಿ ದಹನಮ್**
**ಪಶ್ಚಾತ್ ರಾವಣ ಕುಂಭಕರ್ಣ ಹನುಮಮ್**
**ಎತದ್ವಿ ರಾಮಾಯಣಮ್**

ಇಪ್ಪತ್ತಾರು ಸಾವಿರ ಶ್ಲೋಕಗಳ ಬೃಹತ್ ರಾಮಾಯಣವನ್ನು ಕೆಲವೇ ಶ್ಲೋಕಗಳಲ್ಲಿ ಹೇಳುವ ಕೇಳುವ ಆಲಿಸುವ ಪರಿಪಾಟ ಮಾನ್ಯವಾಗಿದೆ. ಅಂತ ಮಹಾದೈವೀ ಯುಗ ಪುರುಷನ ಮಹಾಕಾವ್ಯಕ್ಕೆ ಮಹಾಯೋಗಿಗೆ ಅನಂತನ ನಮನಗಳು.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T